10. ಎತ್ತೀಯ ಕಾರ್ಯಕಲಾಪ:

2006–07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀಮತಿ ಶಕುಂತಲಾ ಶೆಟ್ಟಿ (ಪುತ್ತೂರು): ಸರ್, ಹಲವು ಮಾನ್ಯ ಸದಸ್ಯರು ಒಂದೂವರೆ ಗಂಟೆ ಮಾತನಾಡಿದರು, ನಾನು ಏಕೈಕ ಮಹಿಳೆ ಅಥವಾ ಇನ್ನೊಬ್ಬರು ಮಾತನಾಡಬಹುದು ಅಷ್ಟೇ ಸರ್, ಆದರೂ ಬೇಗ ಮುಗಿಸುತ್ತೇನೆ. ಜನಪರ ಹೋರಾಟ ಮಾಡಿ ರೈತರ ನಾಯಕರೆಂದು ಹೇಳಿಕೊಂಡ ನಮ್ಮ ಮಾನ್ಯ ಉಪಮುಖ್ಯಮಂತ್ರಿಯವರು ಮಂಡಿಸಿದಂತಹ ಬಜೆಟ್ ಬಹುಶ: ನಾವೆಲ್ಲಾ ಶಾಸಕರಾಗಿ ಬಂದ ಮೇಲೆ ಕೊಟ್ಟಂತಹ ಅತ್ಯುತ್ತಮವಾದಂತಹ ಬಜೆಟ್ ಎಂದು ಹೇಳಿ ನಾನು ಅವರನ್ನು ಪ್ರಥಮವಾಗಿ ಅಭಿನಂದಿಸುತ್ತಿದ್ದೇನೆ. ರೈತರ ಪರವಾಗಿ ಬಹಳಷ್ಟು ವಿಷಯಗಳಿದ್ದರೂ ಅದನ್ನು ಸಣ್ಣ ಸಣ್ಣದಾಗಿ ಹೇಳುತ್ತೇನೆ, ಟ್ರಾಕ್ಟರ್, ಮಿನಿ ಟ್ರಾಕ್ಟರ್, ಟಿಲ್ಲರ್ ಇದೆಲ್ಲಾ ಇಡೀ ರಾಜ್ಯಕ್ಕೆ ಎಲ್ಲಾ ರೈತರಿಗೆ ಹೆಚ್ಚಿಗೆ ಸಿಗುವಂತಹ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಎತ್ತು ಹಾಗು ಗಾಡಿ ಅದರಲ್ಲೂ ಜನರಿಗೆ ಸಹಕಾರವಾಗುವಂತಹ ಯೋಜನೆಯನ್ನು ಹಾಕಿದ್ದಾರೆ, ಮಾನ್ಯ ಉಪಮುಖ್ಯಮಂತ್ರಿಯವರಲ್ಲಿ ನನ್ನದೊಂದು ಬೇಡಿಕೆ, ಏಕೆಂದರೆ ಇಡೀ ರಾಜ್ಯದ ಮಟ್ಟಿಗೆ ನೋಡಿದಾಗ ನಮ್ಮದೊಂದು ಕೊಡುಗೆ ಹಾಗು ದಕ್ಷಿಣ ಕನ್ನಡ, ಸ್ವಲ್ಪ ಮಟ್ಟಿಗೆ ಉಡುಪಿಯಲ್ಲಿ ಅಡಿಕೆ ಬೆಳೆಗಾರರು ಹಾಗೂ ಕಾಫಿ ಬೆಳೆಗಾರರಿಗೆ ಈ ಟಿಲ್ಲರ್ ಇದೆಲ್ಲಾ ಹೆಚ್ಚಿಗೆ ಉಪಯೋಗವಾಗುವುದಕ್ಕಿಂತ ಹೆಚ್ಚಾಗಿ ಫುಟೋರ್ ಪಂಪ್‌ಗಳು ಅದೇ ರೀತಿ ಅಡಿಕೆ ಮರಕ್ಕೆ ಹತ್ತುವಂತಹ ಉಪಕರಣಗಳು, ಇವೆಲ್ಲಾ ಉಪಯೋಗಕ್ಕೆ ಬರುವಂತಹ ಕಾರಣ ಅದನ್ನು ಇದರೊಟ್ಟಿಗೆ ಸೇರಿಸಿಕೊಳ್ಳಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ರೈತರಿಗೆ ಕರೆಂಟ್ ಪಂಪ್ ಇಲ್ಲದವರು ಸಾಮಾನ್ಯ ಸಣ್ಣ ಹಾಗು ಅತೀ ಸಣ್ಣ ರೈತರು ಸೀಮೆಎಣ್ಣೆ ಪಂಪ್‌ಗಳನ್ನು ಉಪಯೋಗಿಸುತ್ತಿದ್ದಾರೆ, ಅಂತಹವರಿಗೆ ಸೀಮೆಎಣ್ಣೆ 6 ತಿಂಗಳಮಟ್ಟಿಗೆ ಪಂಪ್‌ಗೋಸ್ಕರ ಸೀಮೆಎಣ್ಣೆ ಕೊಡುವಂತಹ ಯೋಜನೆಯನ್ನು ಇದಕ್ಕೆ ಸೇರಿಸಿಕೊಳ್ಳಬೇಕೆಂದು ನಾನು ಕೇಳುತ್ತಿದ್ದೇನೆ, ಇದೇ ಸಂದರ್ಭದಲ್ಲಿ ನನ್ನ ಇನ್ನೊಂದು ಬೇಡಿಕೆಯೇನೆಂದರೆ, ಬಹುಶ: ಇವತ್ತು ಮನೆಗಳಲ್ಲಿ ವಿದ್ಯುತ್ತನ್ನು ಪಡೆದು ಉಪಯೋಗಿಸಿಕೊಳ್ಳುವವರು ಬಹಳಷ್ಟು ಕಡಿಮೆ ಜನ, ಇವತ್ತು ಸಾಧಾರಣವಾಗಿ ಮುಂದುವರೆದಂತಹ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೦% ಗಿಂತ ಹೆಚ್ಚಿನ ಜನರು ಇವತ್ತಿಗೂ ಚಿಮಣಿ ದೀಪ ಉರಿಸಿ ಮನೆಯಲ್ಲಿ ಮಕ್ಕಳು ಓದುವಂತಹ ಸ್ಥಿತಿಯಿರುವಾಗ ಪ್ರತಿಯೊಂದು ಕಾರ್ಡುದಾರರಿಗೂ ದೀಪಕ್ಕಾಗಿ ಸೀಮೆಎಣ್ಣೆಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಹಿಳೆಯನ್ನು ಭಾಗ್ಯದ ಲಕ್ಷ್ಮಿ ಬಾರಮ್ಮ ಎಂದು ಇವತ್ತಾದರೂ ಈ ಸೆಷನ್‌ನಲ್ಲಿ ನಮ್ಮನ್ನು ಕರೆದರಲ್ಲಾ ಎಂದು ಸಂತೋಷವಾಗುತ್ತಿದೆ. ಏಕೆಂದರೆ ಮಿನಿಸ್ಟರ್ ಆದ ಮೇಲೆ ನಾವು ಭಾಗ್ಯಲಕ್ಷ್ಮಿಯಾಗುವುದಲ್ಲ, ಸಾಮಾನ್ಯವಾಗಿ ಮಹಿಳೆಯರಿಗೆ "ಭಾಗ್ಯದ ಲಕ್ಷ್ಮೀ" ಎಂಬ ಪದವಿಯಾದರೂ ಬಂತಲ್ಲ ಎಂದು ಹೆಮ್ಮೆ ಎನಿಸುತ್ತಿದೆ, ಏಕೆ ನಾವು ದರಿದ್ರ ಲಕ್ಷ್ಮಿಯರಾಗಿದ್ದೇವೆಂದು ಹೇಳಿದರೆ, ಒಂದು ಕಾಲದಲ್ಲಿ ಕೃತ, ತ್ರೇತಾ, ದ್ವಾಪರಯುಗದಲ್ಲಿ ಹೆಣ್ಣನ್ನು ಮಾತೆ ಎಂದು ಕರೆದರು, ಕಲಿಯುಗದಲ್ಲಿ ಹೆಣ್ಣು ಹೆತ್ತವರಿಗೆ ಹೆಣ್ಣಾದಳು ವ್ಯಥೆ ಎಂದು, ನಾವು ಈಗ ಪತ್ರಿಕೆಗಳಲ್ಲಿ ದನೇ ದಿನೇ ಓದುವಂತಹ ದೌರ್ಜನ್ಯದ ಕಥೆ, ಇದನ್ನು ಕೇಳಿದಾಗ ಪ್ರಾರಂಬವಾಯಿತು ಹೆಣ್ಣೆಂಬ ಭ್ರೂಣ ಹತ್ಯೆ, ಆ ಭ್ರೂಣ ಹತ್ಯೆಯನ್ನು ತಡೆದು 1000ಕ್ಕೆ 966 ಇರುವ ಮಹಿಳಾ ಸ್ಥಾನವನ್ನು 1000ಕ್ಕೆ ಏರಿಸಬೇಕೆಂದು ಹೇಳುವ ಆ ಒಂದು ಮನಸ್ಸಿನಿಂದ ಇವತ್ತು "ಭಾಗ್ಯದ

ಲಕ್ಷ್ಮಿ ಬಾರಮ್ಮ" ಎನ್ನುವಂತಹ ಹೊಸ ಹೊಸ ಯೋಜನೆಗಳನ್ನು ಹಾಕಿದ್ದಾರೆ. ಇವತ್ತು ಹೆಣ್ಣುಮಮಕ್ಕಳು ಉಳಿಯಬೇಕು, ಅವರ ಭವಿಷ್ಯ ಒಳ್ಳೆಯದಾಗಬೇಕೆಂದು ಹೇಳಿ ಪ್ರತಿ ಹೆಣ್ಣುಮಕ್ಕಳಿಗೂ ಹತ್ತು ಸಾವಿರ ರೂಪಾಯಿಗಳನ್ನು ಇಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ, ಅದನ್ನು ವಿಮಾ ಯೋಜನೆಯನ್ನಾಗಿ ಪರಿವರ್ತನೆ ಮಾಡಿ ಯಾವತ್ತಾದರೂ ಅಸೌಖ್ಯವಾದಾಗ ಏನಾದರೂ ಸಂಕಟ ಬಂದಾಗ ಸ್ವಲ್ಪ ಹಣ ಅವಳ ಉಪಯೋಗಕ್ಕೆ ಸಿಗುವಂತಹ ವ್ಯವಸ್ಥೆಯನ್ನು ಇದರೊಂದಿಗೆ ಸೇರಿಸಿಕೊಳ್ಳಬೇಕೆಂದು ನಾನು ಮಾನ್ಯ ಉಪಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನೂ ಏಳನೆ ಕ್ಲಾಸಿಗಿಂತ ಹೆಚ್ಚು ಕಲಿಯುವ ಹೆಣ್ಣುಮಕ್ಕಳಿಗೆ ಸೈಕಲ್ ಯೋಜನೆಯನ್ನು ಇಟ್ಟಿದ್ದಾರೆ. ಇದು ಬಹಳ ಒಳ್ಳೆಯ ಯೋಜನೆ. ಹೇಳುವಾಗ ವಿರೋಧಕ್ಕಾಗಿ ವಿರೋಧ ಎಂದು ಇದು "ಕುಣಿಯಲಿಕ್ಕೆ ಬಾರದವ ಅಂಗಳ ಡೊಂಕು ಎಂದು ಹೇಳಿದ" ಎಂಬ ಗಾದೆಯೊಂದು ನಮ್ಮಲ್ಲಿದೆ, ನಾವು ಮಾರ್ಗದಲ್ಲಿ ಹೊಂಡ ಇದೆ ಅಥವಾ ಅಪಾಯವಿದೆ ಎಂದೆಲ್ಲಾ ಹೇಳಬಹುದು, ಆದರೂ ನನಗನ್ನಿಸುತ್ತಿದೆ, ಸೈಕಲ್‌ಜೊತೆ ಗಲ್ಲಿ ಗಲ್ಲಿಗೆ ಹಳ್ಳಿಯ ಬೀದಿ ಬೀದಿಯಲ್ಲಿ ಬಸ್ ವ್ಯವಸ್ಥೆ ಮಾಡಿದರೆ ಹೆಣ್ಣುಮಕ್ಕಳಿಗೆ ಫ್ರೀ ಪಾಸ್ ಕೊಡುವಂತಹ ವ್ಯವಸ್ಥೆಯನ್ನು ಮಾಡಿದರೆ ಎಲ್ಲಾ ಹೆಣ್ಣು ಮಕ್ಕಳಿಗೂ ಹೆಚ್ಚು ಅನುಕೂಲವಾಗಬಹುದು, ಎಲ್ಲಾ ಹಳ್ಳಿಗಳಲ್ಲಿ ಬಸ್ ಸೌಕರ್ಯ ಆದ ಹಾಗೆ ಆಗುತ್ತದೆ. ನಮ್ಮ ಹೆಣ್ಣುಮಕ್ಕಳಿಗೆ ಫ್ರೀ ಪಾಸ್‌ನಲ್ಲಿ ಕಲಿಯುವಂತಹ ವ್ಯವಸ್ಥೆಯೂ ಆಗುತ್ತದೆ. ಎಲ್ಲರೂ ಜೊತೆ ಜೊತೆಯಾಗಿ ಹೋಗಿ ಕಲಿತು ಬರುವಂತಹ ಒಂದು ಕಾರಣಕ್ಕೆ ಈ ವ್ಯವಸ್ಥೆಯನ್ನು ಉತ್ತಮವೆನಿಸುತ್ತದೆ.

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ (ಕೊಟ್ಟೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ವಿಚಾರವನ್ನು ವ್ಯಕ್ತಪಡಿಸಿದ್ದಾರೆ, ಇಲ್ಲಿ ಒಂದು ಕಾರಣವನ್ನು ಕುರಿತು ನಾವೆಲ್ಲಾ ಮಹಿಳೆಯರೂ ಕುಳಿತುಕೊಂಡು ಮಾತನಾಡಿದಾಗ ಇವತ್ತು ಮಹಿಳೆಯರ ಮೇಲೆ ದೌರ್ಜನ್ಯವನ್ನು ಹೆಚ್ಚಿಸುವಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಶಾಲೆಗಳೂ ತುಂಬಾ ದೂರವಾಗುವಂತಹ ವಿಚಾರದಲ್ಲಿ ಅವರು ಒಳ್ಳೆಯ ವಿದ್ಯಾಭ್ಯಾಸವನ್ನು ಮಾಡಬೇಕೆಂಬ ಹಿತದೃಷ್ಟಿಯನ್ನಿಟ್ಟುಕೊಂಡು ಇವತ್ತು ಸೈಕಲ್‌ಗಳನ್ನು ಕೊಡುವಂತಹ ವ್ಯವಸ್ಥೆಯನ್ನು ತಾವಿಲ್ಲಿ ಹೇಳಿದ್ದೀರಿ. ಆದರೆ ಕೇವಲ ಈ ಮೂರು ನಾಲ್ಕು ತಿಂಗಳಲ್ಲಿ ವಿದ್ಯಾರ್ಥಿನಿಯರು ಶಾಲೆಗಳನ್ನು ಸೇರಿದ ನಂತರ ಅವರ ಮೇಲೆ ಆಗತಕ್ಕಂಥ ದೌರ್ಜನ್ಯಗಳನ್ನು ಏನು ಕೇಳುತ್ತಿದ್ದೇವೆ, ಈ ವಿಚಾರವನ್ನು ನೋಡಿದಾಗ ನಾವು ನಾಲ್ಕೈದು ಕಿ.ಮಿ.ನಿಂದ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ, ಅವರು ಎಷ್ಟರಮಟ್ಟಿಗೆ ಸುರಕ್ಷಿತವಾಗಿ ಶಾಲೆಯನ್ನು ತಲುಪುತ್ತಾರೆ. ಬೆಳಿಗ್ಗೆ ಒಂದು ರೀತಿಯಲ್ಲಿ ಯೋಚನೆ ಮಾಡಿದರೆ ಸಾಯಂಕಾಲ ಬರುವಂತಹ ಹೊತ್ತಿನಲ್ಲಿ ಎಷ್ಟರ ಮಟ್ಟಿಗೆ ಇದು ಅನುಕೂಲಕರವಾಗುತ್ತದೆಂಬ ವಿಚಾರವನ್ನು ದಯವಿಟ್ಟು ತಾವು ಗಮನಕ್ಕೆ ತಂದುಕೊಳ್ಳಬೇಕೆಂದು ಹೇಳುತ್ತಾ, ಇದರ ಬದಲಿಗೆ ಮಾನ್ಯ ಸದಸ್ಯರು ಹೇಳಿದ ಹಾಗೆ ಬಸ್ಸಿನ ವ್ಯವಸ್ಥೆಯನ್ನು ಹೆಚ್ಚು ಮಾಡಿ ಅದರ ಅನುಕೂಲವನ್ನು ನೀಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಹಿಂದೆ 1996–97 ರಲ್ಲಿ ಜಾಗೃತಿ ಎಂಬ ಕಾರ್ಯಕ್ರಮವನ್ನು ಕೊಟ್ಟಿದ್ದಿರಿ, ಅದರಲ್ಲೂ ಕೂಡ ಮಹಿಳೆಯರಿಗೆ ನಾವು ಸೈಕಲ್ಲನ್ನು ಕೊಟ್ಟಿದ್ದೆವು, ಆದರೆ ಅದು ಎಷ್ಟರಮಟ್ಟಿಗೆ ಸಫಲವಾಯಿತು ಎಂಬುದು ತಮಗೂ ಸಹ ಗೊತ್ತಿದೆ. ಆದ್ದರಿಂದ ದಯವಿಟ್ಟು ಈ ವಿಚಾರದಬಗ್ಗೆ ಗಮನಿಸಬೇಕೆಂದು ನಾನು ಅಧ್ಯಕ್ಷರ ಮೂಲಕ ತಮ್ಮಲ್ಲಿ ಕೋರುತ್ತೇನೆ.

ಶ್ರೀಮತಿ ಶಕುಂತಲಾ.ಟಿ.ಶೆಟ್ಟಿ: ಈಗ ದಿನಂಪ್ರತಿ ನಾವು ಪತ್ರಿಕೆಗಳಲ್ಲಿ ಓದಿದಾಗ ವಿದ್ಯಾರ್ಥಿನಿಯರಿಗೆ ಶಿಕ್ಷಕನಿಂದ ಕಿರುಕುಳ, ತಂದೆಯಿಂದಲೇ ಮಗಳ ಮೇಲೆ ಅತ್ಯಾಚಾರ, ತಾಯಿಯೇ ಮಗಳನ್ನು ಮಾರಾಟ ಮಾಡುವಂತಹ ಈ ಸ್ಥಿತಿಗಳು ಹೆಚ್ಚು ಹೆಚ್ಚಾಗಿ ಕಂಡು ಬರುವ ಕಾರಣ ಹೆಣ್ಣುಮಕ್ಕಳಿಗೆ ಅತೀ ಅಗತ್ಯವಾಗಿ ರಕ್ಷಣೆ ಕೊಡುವ ವ್ಯವಸ್ಥೆಯಾಗಬೇಕಾಗಿರುವುದರಿಂದ ಹೆಣ್ಣು ಮಕ್ಕಳಿಗೆ ಇನ್ನೂ ಹೆಚ್ಚಿನ ಸೌಲಭ್ಯ ಕೊಡಬೇಕೆನ್ನುವ ಅಪೇಕ್ಷೆಯಿಂದ ಹೇಳುತ್ತಿದ್ದೇನೆ, ಅಲ್ಲಲ್ಲಿ ಇನ್ನೂ ಹೆಚ್ಚಿನ ಕಡೆಗಳಲ್ಲಿ ಹೆಣ್ಣುಮಕ್ಕಳ ಶಾಲೆಗಳನ್ನು, ಹೈಸ್ಕೂಲು, ಪದವೀಪೂರ್ವ ಕಾಲೇಜುಗಳ ಜೊತೆ ಹೆಣ್ಣುಮಕ್ಕಳ ಹಾಸ್ಟಲ್‌ಗಳನ್ನು ತೆರೆದಲ್ಲಿ ಹೆಣ್ಣುಮಕ್ಕಳು ಮತ್ತಷ್ಟು ರಕ್ಷಣೆ ಪಡೆಯಬಹುದೆಂದು ನನ್ನ ಅನಿಸಿಕೆ. ಹಾಗೆಯೇ ವಿಡೊ ಪೆನ್‌ಷನ್, ಓಲ್ಡೇಜ್ ಪೆನ್‌ಷನ್ 200.00 ರೂ.ಗಳಿಗೆ ಏರಿಸಿದ್ದಾರೆ, ಆ ಎಲ್ಲಾ ವಿಧವೆಯರ ಹಾಗು ವೃದ್ಧರ ಪರವಾಗಿ ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಬಳವನ್ನು ಹೆಚ್ಚಿಸಿದ್ದೀರಿ, ಅವರ ಪರವಾಗಿಯೂ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಹೆಣ್ಣುಮಕ್ಕಳ ಬಗ್ಗೆ ಬಹಳ ಸುದೀರ್ಘವಾಗಿ ಮಾತನಾಡುತ್ತಿದ್ದಾರೆ. ಒಬ್ಬರಾದರು ಹೆಣ್ಣುಮಕ್ಕಳನ್ನಾದರೂ ಯಡಿಯೂರಪ್ಪನವರು ತಮ್ಮ ಟೀಮಿನಲ್ಲಿ ಮಂತ್ರಿಗಳನ್ನಾಗಿ ಮಾಡಿಕೊಂಡಿಲ್ಲವೆಂದರೆ, ಇದು ಎಷ್ಟು ಅನ್ಯಾಯ ಅಂದರೆ ವಿಶ್ವ ಮಹಿಳಾ ವರ್ಷದಲ್ಲಿ ಮಹಿಳೆಯರಿಗೆ ಮಾಡಿದಂಥ ಅತ್ಯಂತ ನೋವು, ಅನ್ಯಾಯ, ನೀವು ಯಾರನ್ನಾದರೂ ಒಬ್ಬರನ್ನಾದರೂ ಮಂತ್ರಿಯನ್ನಾಗಿ ಮಾಡಬೇಕಾಗಿತ್ತು, ಇದು ನಿಜಕ್ಕೂ ಖಂಡಿತವಾಗಿ ಮಹಿಳೆಯರಿಗೆ ಬಹಳ ಅನ್ಯಾಯ ಮಾಡಿದ್ದೀರಿ, ನೀವು ಸಚಿವ ಸಂಪುಟಕ್ಕೆ ಒಬ್ಬರನ್ನಾದರೂ ತೆಗೆದುಕೊಂಡಿದ್ದಾರೆ ನಾವೆಲ್ಲರೂ ಮೆಚ್ಚುತ್ತಿದ್ದೆವು, ನಿಮಗ್ಯಾಕೆ ಮಹಿಳೆಯರ ಬಗ್ಗೆ ಇಷ್ಟು ಉದಾಸೀನ, ತಾತ್ಸಾರ ಇವೆಲ್ಲಾ ಏಕೆ ನಿಮಗೆ ಯಾವ ಉದ್ದೇಶಕ್ಕೆ ಎಂದು?

ಶ್ರೀ ಆರಗ ಜ್ಞಾನೇಂದ್ರ: ಅಧ್ಯಕ್ಷರೇ, ಸರ್, ಇಡೀ ಬಜೆಟ್ ಅನ್ನೇ ಹೆಣ್ಣು ಮತ್ತು ಮಣ್ಣು ಎಂದು ಯಾವುದೋ ಪತ್ರಿಕೆಯಲ್ಲಿ ಹೆಡ್‌ಲೈನ್‌ನಲ್ಲಿ ಬರೆದಿದೆ, ಹೆಣ್ಣು ಮತ್ತು ಹೊನ್ನು ಕೇಂದ್ರಿತವಾಗಿದೆ ಈ ಬಜೆಟ್ ಎಂದು ಹೇಳಿ ಬರೆದಿದೆ, ಹೆಣ್ಣುಮಕ್ಕಳಿಗೆ ಈ ಬಜೆಟ್‌ನಲ್ಲಿ ಕೊಟ್ಟಂತಹ ಪ್ರಾಶಸ್ತ್ಯವನ್ನು ಗಮನಿಸಿಯೂ ಸಹ ನೀವು ಉದಾಸೀನ ಅದು ಇದು ಎಂದು ಅವರನ್ನು ಚುಚ್ಚುತ್ತೀರಲ್ಲಾ? ಹೆಣ್ಣು ಮತ್ತು ಮಣ್ಣು, ಹೆಣ್ಣುಮಕ್ಕಳಿಗೆ ಮತ್ತು ಮಣ್ಣಿನ ಮಕ್ಕಳಿಗೆ ಎರಡನ್ನೂ ಕೇಂದ್ರಿತವಾಗಿಟ್ಟುಕೊಂಡು ಬಜೆಟ್ಟನ್ನು ತಯಾರಿಸಿದ್ದಾರೆ, ನೀವು ಇಂತಹ ಶಬ್ದಗಳನ್ನು ಬಳಸಬೇಡಿ.

ಚೇರ್ಮನ್:– ಶಕುಂತಲಾ ಶೆಟ್ಟಿಯವರೇ ಮುಂದುವರೆಸಿ, ಬೇಗ ಮುಗಿಸಿ,

ಶ್ರೀ ವಾಟಾಳ್ ನಾಗರಾಜ್:– ಸಂತೋಷ, ನೀವು ಮಾತ್ರ ಆಗುವುದಾದರೆ ಬಹಳ ಸಂತೋಷ, ನನ್ನದೇನು ಅಭ್ಯಂತರವಿಲ್ಲ, ಅವರು ಆಗುತ್ತಾರೆಂದು ನಿಮ್ಮಲ್ಲಿತ್ತು, ನೀವು ಅವರನ್ನು ಕೈಬಿಟ್ಟಿರಿ, ಅಥವಾ ಬೇರೆ ಯಾರನ್ನಾದರು ಹೆಣ್ಣುಮಕ್ಕಳನ್ನು ಮಂತ್ರಿಯನ್ನಾಗಿದ್ದರೆ ಚೆನ್ನಾಗಿತ್ತು, ಈಗ ಬರೇ ನೀವು ನೀವೆ, ಎಲ್ಲಾ ಪುರಷರೇ, ಒಬ್ಬ ಮಹಿಳೆಯನ್ನಾದರೂ ಕನಿಷ್ಠ ಒಬ್ಬ ಮಹಿಳೆಯನ್ನಾದರೂ ಮಂತ್ರಿಯಾಗಿ ಮಾಡಿದ್ದರೆ ಬಹಳ ಸಂತೋಷವಾಗಿತ್ತು ಎಂದು ನಾನು ಹೇಳುತ್ತೇನೆ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ:– ಅಂಗನವಾಡಿ ಕಾರ್ಯಕರ್ತೆಯರಿಗೆ ನೂರು ರೂಪಾಯಿಗಳಷ್ಟು ಹೆಚ್ಚಿಗೆ ಮಾಡಿದ್ದರ ಜೊತೆಗೆ ನಮ್ಮ ಒಂದು ಬೇಡಿಕೆಯಿದೆ, ಆ ಅಂಗನವಾಡಿ ಕಾರ್ಯಕರ್ತೆಯರೂ ನಿವೃತ್ತರಾಗುವಾಗ ಅವರಿಗೆ 10,000/– ಅಥವಾ 20,000/– ಏಕಗಂಟಿನಲ್ಲಿ

ಸಿಗುವಂತಹ ಗೌರವಧನವನ್ನು ನೀಡುವಂತಹ ವ್ಯವಸ್ಥೆಯನ್ನು ಜೋಡಿಸಿಕೊಂಡರೆ ಇನ್ನೂ ಉತ್ತಮವೆಂದು ನನ್ನ ಅನಿಸಿಕೆ. ಜೊತೆಗೆ ಗೋಡಂಬಿ ಕಾರ್ಖಾನೆಗಳು ನಮ್ಮ ದಕ್ಷಿಣ ಕನ್ನಡ, ಉಡುಪಿ ಎರಡೂ ಜಿಲ್ಲೆಗಳಲ್ಲಿ ಬಹಳಷ್ಟಿವೆ, ಅಲ್ಲಿ ಸಾಧಾರಣ ಒಂದು ಲಕ್ಷದಷ್ಟು ಮಹಿಳಾ ಕಾರ್ಮಿಕರು ದುಡಿಯುತ್ತಿದ್ದಾರೆ, ಆದ ಕಾರಣ ಆ ಗೋಡಂಬಿಯ ತೆರಿಗೆಯನ್ನು ಕಡಿಮೆ ಮಾಡಿ ನಾಲ್ಕು ಪರ್ಸೆಂಟ್‌ಗೆ ಇಳಿಸಿ ಅವರಿಗೆ ಕೆಲಸ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕಾಗಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ, ಹಾಗಯೇ ನಮ್ಮ ದಕ್ಷಿಣ ಕನ್ನಡ ಹಾಗು ಕೊಡಗು ಜಿಲ್ಲೆಯಲ್ಲಿ ಜೇನು ಬೆಳೆಗಾರರು ಮಹಿಳೆಯರೇ ಹೆಚ್ಚಾಗಿ ಮನೆಯಲ್ಲಿಯೇ ಇದ್ದುಕೊಂಡು ಹೆಚ್ಚಾಗಿ ಬೆಳೆಸುತ್ತಿದ್ದಾರೆ, ತೆರಿಗೆ ವಿನಾಯಿತಿ ಮಾಡುವುದರಲ್ಲಿ ಅದನ್ನು ಸೇರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನಾನು ಒಂದು ದಿವಸ ಪುತ್ತೂರಿನ ಪೊಲೀಸ್ ಕ್ವಾರ್ಟರ್ಸ್‌ಗೆ ಬೇಟಿಯನ್ನು ಕೊಟ್ಟಿದ್ದೆನು, ಬಹುಶ: ಪೊಲೀಸರಷ್ಟು ಕೆಳಮಟ್ಟದ ದುಸ್ಥಿತಿ ಎಲ್ಲಿಯೂ ಇಲ್ಲವೆನಿಸಿತು, ಏಕೆಂದರೆ ಆ ಮನೆಯೊಳಗೆ ಹೋದಾಗಲೆ ಮಾಡೆಲ್ಲಾ ತಲೆ ಮೇಲೆ ಬೀಳುವುದೇನೋ ಅನಿಸಿತು, ಆಮೇಲೆ ಶೌಚಾಲಯದ ವ್ಯವಸ್ಥೆಯಂತೂ ಬಹಳ ಕೆಟ್ಟ ಪರಿಸ್ಥಿತಿಯಲ್ಲಿತ್ತು, ಆದರೆ ಈ ಬಾರಿ ಅದಕ್ಕಾಗಿ ಹೆಚ್ಚಿನ ಹಣವನ್ನು ಒದಗಿಸಿದ್ದು ಇನ್ನಾದರೂ ಪೊಲೀಸರು ವಾಸನೆಯಿಲ್ಲದೆ ಬದುಕುಬಹುದು ಎಂದು ಹೇಳುವಂತಹ ಧೈರ್ಯ ತಂದಿದೆ. ಹಾಗಾಗಿ ಜನರಿಗೂ ಸ್ವಲ್ಪ ಸುರಕ್ಷೆಯಿಂದ ಬದುಕಬಹುದು ಎಂದು ನನಗನ್ನಿಸುತ್ತಿದೆ. ಪಶುಸಂಗೋಪನೆಗೆ ಬಹಳ ಆಸಕ್ತಿಯನ್ನು ವಹಿಸಿದ್ದೀರಿ, ಅದರಲ್ಲಿ ನನ್ನ ಬೇಡಿಕೆಯೇನೆಂದರೆ ಜಿಲ್ಲೆಗೊಂದು 20 ಎಕರೆ ಇಡುವ ಬದಲು ಪ್ರತಿ ತಾಲ್ಲೂಕಿನಲ್ಲಿ ಗೋಮಾಳಗಳನ್ನು ಯಾರಿಗಾದರೂ ಪಶು ಸಮೃದ್ಧಿಗೆ ನಮ್ಮ ದೇಶೀಯ ತಳಿ ಸಂವರ್ಧನೆಗಾಗಿ ಮೀಸಲಾಗಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಏಕೆಂದರೆ ಹೆಣ್ಣಿನ ಮತ್ತು ಗೋವಿನ ಕಣ್ಣಿನ ನೀರು ಯಾವ ಭೂಮಿಗೆ ಬೀಳುತ್ತದೆ ಆ ಭೂಮಿಗೆ ಯಾವತ್ತೂ ಒಳ್ಳೆಯದಾಗುವುದಿಲ್ಲವೆಂದು ನಮ್ಮ ಹಿರಿಯರು ಹೇಳಿದ್ದಾರೆ. ಆದಕಾರಣ ಯಾವುದೋ ಕಸಾಯಿಖಾನೆಗೆ ತೆಗೆದುಕೊಂಡುವಂತಹ ದನಗಳನ್ನು ಆ ಜಾಗದಲ್ಲಿಟ್ಟು ಸಾಕಿ ಸಾರ್ವಜನಿಕರಿಗೆ ಉಪಯೋಗವಾಗುವಂತಹ ಅದರ ಮೂತ್ರ, ಸೆಗಣಿ, ಅದರಿಂದ ತಯಾರಿಸುವ ವಸ್ತುಗಳನ್ನು ತಯಾರು ಮಾಡಿ ನಮ್ಮ ಭೂಮಿಯನ್ನು ಫಲವತ್ತು ಮಾಡಲಿಕ್ಕೆ ಅವಕಾಶವಾಗುವ ಕಾರಣ ಭಾರತೀಯ ತಳಿಗಳನ್ನು ಪೋಷಿಸುವವರಿಗೆ ಮಾತ್ರ ಆ ಅವಕಾಶವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಪಶು ಸಂಗೋಪನೆಗೆ ನನ್ನ ಪುತ್ತೂರು ತಾಲ್ಲೂಕಿನಲ್ಲಿ 15 ವರ್ಷಗಳಿಂದ ಯಾವುದೇ ಪಶು ವೈದ್ಯಕೀಯ ಶಾಲೆಗಳನ್ನು ಮೇಲ್ದರ್ಜೆಗೆ ಏರಿಸಿಲ್ಲ, ನಾನು ನನ್ನ ಉಪ್ಪಿನಂಗಡಿ ಹಾಗು ಕಡಬ ಎರಡನ್ನೂ ಮೇಲ್ದರ್ಜೆಗೇರಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಇನ್ನೂ ಕಾರ್ಮಿಕ ಇಲಾಖೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಸುಮಾರು ಮೂರುವರೆ ಲಕ್ಷದಷ್ಟು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಬೀಡಿಕಾರ್ಮಿಕರಿದ್ದಾರೆ, ಅದರಲ್ಲಿಯೂ ಮಹಿಳೆಯರೇ ಬೀಡಿ ಕಾರ್ಮಿಕರು, ಅವರಿಗೀಗ ಬಹಳ ದೊಡ್ಡದೊಂದು ಸಮಸ್ಯೆ ಬಂದಿದೆ, ಅವರಿಗೆ ಮನೆಗಾಗಿ 60,000/–ರೂ ಗಳನ್ನು ಕೇಂದ್ರ ಸರ್ಕಾರ ಈ ಹಿಂದೆ ಬೀಡಿ ಕಾರ್ಮಿಕರ ಕಲ್ಯಾಣ ಸಂಸ್ಥೆಯವತಿಯಿಂದ ಕೊಡುತ್ತಿದ್ದರು, ಆದರೆ ಈಗ ಅಲ್ಲಿ ಹೋಗಿ ಕೇಳಿದರೆ ಡಿ.ಸಿ. ಆಫೀಸ್‌ನಲ್ಲಿ ಅರ್ಜಿ ಕೊಡಬೇಕೆಂದು ಹೇಳುತ್ತಾರೆ, ಡಿ.ಸಿ. ಆಫೀಸಿಗೆ ಹೋದರೆ ಇಲ್ಲಿ ಅಂತಹ ಅರ್ಜಿಗಳು ಬರಲಿಲ್ಲವೆಂದು ಹೇಳುತ್ತಾರೆ. ಜೊತೆಗೆ 5,000/–ರೂಪಾಯಿಗಳನ್ನು ಡೆಪಾಸಿಟ್ ಇಡಬೇಕೆಂದು ಹೇಳುತ್ತಾರೆ.

ಬೀಡಿ ಕಟ್ಟಿ ಹೊಟ್ಟೆ ತುಂಬಿಸಿಕೊಳ್ಳುವವರು 5,000/–ರೂ ಗಳನ್ನು ಡೆಪಾಸಿಟ್ ಇಟ್ಟು ಆಮೇಲೆ ಅರ್ಜಿ ಹಾಕಬೇಕೆಂದು ಹೇಳುವುದು ಸರಿಯಲ್ಲ, ಅವರಿಗೆ ಹಿಂದಿನ ಹಾಗೆ ಬೀಡಿ ಕಾರ್ಮಿಕರ ಕಲ್ಯಾಣ ಸಂಸ್ಥೆಯಲ್ಲಿ ವ್ಯವಸ್ಥೆಯನ್ನು ಮಾಡಬೇಕು, ಅಕಸ್ಮಾತ್ ಅದನ್ನು ಕಂದಾಯ ಇಲಾಖೆಗೆ ವರ್ಗಾವಣೆ ಮಾಡುವುದಾದರೆ ತಾಲ್ಲೂಕು ಆಫೀಸಿನಲ್ಲಿ ಆ 5,000/–ರೂ ಗಳನ್ನು ಡೆಪಾಸಿಟ್ ಇಡದೇ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂತಲೂ ನಾನು ಕೇಳಿಕೊಳ್ಳುತ್ತಿದ್ದೇನೆ. ನಾವು ಮಹಿಳೆಯರು ಮಾತನಾಡುವಾಗ ಮಧ್ಯದಲ್ಲೆಲ್ಲಾ ಮಾತನಾಡುತ್ತಾರೆ, ಬೆಲ್ ಹೊಡೆಯಬೇಡಿ ಸರ್, ವಿಶ್ವಕರ್ಮರು ಹಾಗು ಟೈಲರ್ಸ್ ಅವರು ಅಸಂಘಟಿತ ಕಾರ್ಮಿಕರು ಬಹಳಷ್ಟು ಜನ ನಮ್ಮ ಕರ್ನಾಟಕದಲ್ಲಿದ್ದಾರೆ. ಅವರನ್ನು ಕಾರ್ಮಿಕರ ವ್ಯಾಪ್ತಿಗೆ ಸೇರಿಸಿಕೊಂಡು ಅವರಿಗು ಭವಿಷ್ಯ ನಿಧಿಯನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಸಾರಿಗೆ ವ್ಯವಸ್ಥೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನನ್ನ ಪುತ್ತೂರು ಡಿಪೊದಲ್ಲಿ 11,600 ವಿದ್ಯಾರ್ಥಿಗಳಿಗೆ ಪಾಸ್ ನೀಡಲಾಗಿದೆ ಅಲ್ಲಿ ಯಾವತ್ತು ನೋಡಿದರು ಬಸ್‌ನ ಕೊರತೆ ಎದ್ದು ಕಾಣುತ್ತಿದೆ, ಯಾವತ್ತು ಹೋಗಿ ಕೇಳಿದರು ಅಲ್ಲಿಯ ನಮ್ಮ ಡಿ.ಸಿ ಯವರು, "ಇಲ್ಲಿ ನಷ್ಟದಲ್ಲಿ ನಡೆಯುತ್ತಿದೆ" ಎಂದು ಹೇಳುತ್ತಿದ್ದರು. ನನಗೇನು ಅನಿಸುತ್ತಿದೆ ಎಂದರೆ, ಖಾಸಗಿಯವರಿಗೆ ಹಾಗೂ ಕೆಎಸ್‌ಆರ್‌ಟಿಸಿ ಯವರಿಗೆ ಏನಾದರು ಸಂಬಂಧವಿದೆಯಾ ನನಗೆ ಗೊತ್ತಿಲ್ಲ. ಮೊನ್ನೆ ಇತ್ತೀಚೆಗೆ ನಾನೊಂದು ಬಸ್‌ನಲ್ಲಿ ಬರುತ್ತಿರುವಾಗ ಟಿಕೆಟ್ ಕೊಟ್ಟ ಕಂಡಕ್ಟರ್‌ನ ಬಗ್ಗೆ ಚೆಕ್‌ಗೆ ಬಂದವರು ನನ್ನ ಎದುರುಗಡೆಯೆ ಏನೊ ಮಾತನಾಡಿದರು, ಮತ್ತೆ ನೋಡಿದರೆ 15 ದಿವಸಗಳಲ್ಲಿ ಅಮಾನತ್ತಾಗಿ ಮನೆಗೆ ಹೋಗಿದ್ದ. ವಿಚಾರಿಸಿದಾಗ ಅದಕ್ಕೆ ಬೇರೆ ಕಾರಣವನ್ನು ಕೊಟ್ಟು ಕೊನೆಗೆ ಕೇಸು ದಾಖಲಾಗುವಾಗ, ಶಾಸಕರು ಇದ್ದದ್ದು ಸುಳ್ಳೆಂದು ಮಾಡಿದರು. ಆ ವ್ಯಕ್ತಿ ಕೆಎಸ್‌ಆರ್‌ಟಿಸಿ ಬಸ್‌ಗೆ ಲಾಸ್ ಆಗುತ್ತಿದೆ ಎಂದು ಬಸ್‌ಸ್ಟ್ಯಾಂಡ್‌ನಲ್ಲಿ ಹೋರಾಟ ಮಾಡಿದಂತಹ ಕಾರ್ಯನಿರ್ವಾಹಕ, ಅವನನ್ನು ಅಮಾನತ್ತು ಮಾಡಿದ್ದಾರೆ, ಜೊತೆಯಲ್ಲಿದ್ದ ವ್ಯಕ್ತಿಯೊಬ್ಬನನ್ನು ಅಮಾನತ್ತು ಮಾಡಿದ್ದಾರೆ. ತನ್ನ ಸಂಸ್ಥೆಯ ಬಗ್ಗೆ ಅಭಿಮಾನವಿಟ್ಟು ಹೋರಾಟ ಮಾಡಿದವರನ್ನು ಅಮಾನತ್ತಿನಲ್ಲಿಡುವುದಾದರೆ ಅದಕ್ಕೆ ಯಾವುದೋ ಒಂದು ಕಾರಣವಿರಬೇಕು, ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು ಆ ಬಡವರಿಗೆ ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ. ಆಶ್ರಯ ಮನೆಗಳನ್ನು 20,000 ಇದ್ದದ್ದನ್ನು 25,000 ರೂಪಾಯಿಗಳಿಗೆ ಎರಿಸಿದ್ದೀರಿ ಬಹಳ ಸಂತೋಷ ಆದರೆ ನಗರದಲ್ಲಿ ಆಶ್ರಯ ಮನೆಗಳನ್ನು ಕೊಟ್ಟಲ್ಲಿ ಅವರಿಗೆ ಪ್ರತಿ ವರ್ಷ ಕಂತು ಕಟ್ಟುವಹಾಗೆ ಅದು ಬಡ್ಡಿ ಸಮೇತ ವಾದಾಗ 53,000 ರೂಪಾಯಿಗಳಾಗುತ್ತದೆ ಅದನ್ನು 15 ವರ್ಷಗಳಲ್ಲಿ ಅವರು ಕೊಡಬೇಕಾಗುತ್ತದೆ. ರೈತರಿಗೆ ಬಡ್ಡಿ ಮನ್ನ ಮಾಡಿದ ರೀತಿ ಆಶ್ರಯ ಮನೆ ಕಟ್ಟುವವರಿಗೂ ಬಡ್ಡಿ ರಿಯಾಯಿತಿಯನ್ನು ಸೇರಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ 106 ಮನೆಗಳು ಹೆಚ್ಚಿಗೆ ಆಗಿವೆ ಅವನ್ನು ನಾವು ಆಶ್ರಯ ಸಮಿತಿಯ ಜಾಗೃತ ಸಮಿತಿಯವರು ಹೇಗಾದರು ಬದಲಾವಣೆ ಮಾಡಿ ಕೊಡುವಂತಹ ಹಕ್ಕನ್ನು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ. ಬಿಪಿಎಲ್ ಎಂದರೆ 11,000 ರೂಪಾಯಿಗಳು, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀ ಕಡಿಮೆ ದಿನಗೂಲಿ ಸಂಬಳವೆಂದರೆ ರೂ. 50, ಆಗ ನಮ್ಮ ಎಂ.ಪಿ.ಪ್ರಕಾಶ್‌ರವರು "ನಮಗೆ ನಿಮ್ಮದೆಲ್ಲಾ ದುಬೈ ಎಂದು" ಹೇಳಿದರು. ನಮ್ಮಲ್ಲಿ ಭಿಕ್ಷುಕನಾದರು ದಿವಸಕ್ಕೆ ರೂ. 50 ಸಂಪಾದನೆ ಇರುತ್ತದೆ, ಹಾಗಾದರೆ 18,000 ರೂಪಾಯಿಗಳು ವರ್ಷಕ್ಕೆ

ಆದಾಯವಾಗುತ್ತದೆ ಅದಕ್ಕೆ ಆ ಬಿಪಿಎಲ್ ಲಿಮಿಟ್ ಅನ್ನು ಸ್ವಲ್ಪ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಗ್ಯಾಸ್ ಬಳಕೆ ಬಗ್ಗೆ ವಿಶೇಷವಾಗಿ ನಾನು ಸದನದಲ್ಲಿ ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಗ್ಯಾಸ್ ಅಳವಡಿಸಿದ ವಾಹನಕ್ಕೆ ಪರ್ಮಿಷನ್ ಇದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ರೀತಿಯ ವಾಹನವನ್ನು ಓಡಿಸಿದರೆ ಕೇಸ್ ಹಾಕುತ್ತಿದ್ದಾರೆ, ಇದಕ್ಕಿರುವ ಎರಡು ಕಾನೂನುಗಳನ್ನು ಹೊಗಲಾಡಿಸಿ, ಇಡಿ ರಾಜ್ಯಕ್ಕೊಂದು ಕಾನೂನು ಮಾಡಬೇಕೆಂದು ಕೇಳುತ್ತೇನೆ ನಮ್ಮ ಪೂತ್ತೂರಿನಲ್ಲಿ 100 ಹಾಸಿಗೆಯ ಆಸ್ಪತ್ರೆ ಇದೆ. ಅದು ಈಗಲೂ ಜೆಡ್‌ಪಿ ಕೆಳಗಿದೆ, ಸರ್ಕಾರಿ ಆಸ್ಪತ್ರೆ ಎಂದು ಪರಿವರ್ತನೆಯಾಗಿಲ್ಲ, ಹುಚ್ಚು ನಾಯಿ ಕಡಿತಕ್ಕೆ, ಹಾಗೂ ಹಾವು ಕಡಿತಕ್ಕೆ ಹೆಚ್ಚಿನ ಔಷಧಿಯನ್ನು ಕೊಡಬೇಕು. ಅರಣ್ಯ ಇಲಾಖೆಯಲ್ಲಿ ರಸ್ತೆ ತಂತಿ ಇವುಗಳಿಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಲೋಕೋಪಯೋಗಿ ಇಲಾಖೆಯ ರಸ್ತೆಗಳ ಗುಂಡಿಗಳನ್ನು ಮುಚ್ಚಿ ರಸ್ತೆಗಳನ್ನು ಸರಿಪಡಿಸಬೇಕು ಎಂದು ಹೇಳಿ ಈ ಉತ್ತಮವಾದ ಬಜೆಟ್ ಅನ್ನು ಮಂಡಿಸಿದಂತಹ ನಮ್ಮ ಸರ್ಕಾರಕ್ಕೆ ನಾನು ಮಗದೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ದಿನೇಶ್. ಗುಂಡುರಾವ್(ಗಾಂಧಿನಗರ): ಮಾನ್ಯ ಅಧ್ಯಕ್ಷರೆ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು ಹೆಚ್ಚು ಸಮಯ ತೆಗೆದು ಕೊಳ್ಳದೆ ಸಂಕ್ಷಿಪ್ತವಾಗಿ ಈ ಒಂದು ಬಜೆಟ್ ಮೇಲೆ ಮಾತನಾಡುತ್ತೇನೆ. ಇವತ್ತು ಅನೇಕ ವಿಚಾರಗಳು ಈಗಾಗಲೇ ಪ್ರಸ್ತಾಪವಾಗಿ ಬಜೆಟ್ ಬಗ್ಗೆ ಸಾಕಷ್ಟು ಈ ಸದನದಲ್ಲಿ ಚರ್ಚೆ ಯಾಗಿದೆ ಮತ್ತು ಯಾವ ರೀತಿಯಲ್ಲಿ ಈ ಸರ್ಕಾರಕ್ಕೆ ಹೇಗೆ ಹಿಂದಿನ ನಮ್ಮ ಎಸ್.ಎಂ.ಕೃಷ್ಣ ಸರ್ಕಾರವಿರಬಹುದು, ಹಾಗೂ ಧರ್ಮಸಿಂಗ್ ಸರ್ಕಾರದಲ್ಲಾದಂತಹ ಒಂದು ಆರ್ಥಿಕ ಬೆಳವಣಿಗೆಯಿಂದ ಈ ಒಂದು ಸರ್ಕಾರಕ್ಕೆ ಸಾಕಷ್ಟು ಸಂಪನ್ಮೂಲಗಳು ಸಿಕ್ಕಿರತಕ್ಕಂಥದ್ದು ಮತ್ತು ಅದರಲ್ಲು ಕೂಡ ಒಂದು ರೀತಿ ಸಂಪತ್ಭರಿತವಾಗಿರತಕ್ಕಂಥ ಒಂದು ಅವಕಾಶ ಮಾನ್ಯ ಯಡಿಯೂರಪ್ಪ ಸಾಹೇಬರಿಗೆ ಸಿಕ್ಕಿದೆ. ಆದರೂ ಕೂಡ ಅನೇಕ ವಿಚಾರಗಳಲ್ಲಿ ಡೆವಲಪ್‌ಮೆಂಟ್ ವಿಚಾರದಲ್ಲಿ ಏನಾಗಬೇಕಾಗಿತ್ತೋ ಅದು ಆಗಿಲ್ಲವೆಂಬ ಒಂದಂಶವಿದೆ. ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ, ಇವತ್ತೇನು ತೆರಿಗೆಯಿಂದ ಆದಾಯ ಬರುತ್ತದೆ ಅದನ್ನು ಕೂಡ ಹೆಚ್ಚು ಮಾಡಬೇಕೆಂದು ಮಾನ್ಯ ಸಿದ್ಧರಾಮಯ್ಯ ಎಲ್ಲರು ಕೂಡ ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ಅದಕ್ಕೆ ನಾವು ಇನ್ನೊಂದು ಅಂಶವನ್ನು ಸೇರಿಸುವುದೇನೆಂದರೆ, ಇವತ್ತು ತೆರಿಗೆಯೇತರ ಮೂಲದಿಂದ ಬರುವ ರೆವಿನ್ಯೂನಲ್ಲು ಕೂಡ ಕಡಿಮೆಯಾಗುತ್ತದೆ. ಇವತ್ತೇನು ಸರ್ಕಾರ ಇನ್ವೆಸ್ಟ್‌ಮೆಂಟ್ ಮಾಡುತ್ತದೆ, ಅಥವಾ ಸಾಲವನ್ನು ಕೊಡುತ್ತದೆ, ಅದರಲ್ಲು ಇವತ್ತು ಬಹಳಷ್ಟು ಒಂದು ಕೊರತೆ ಇದೆ. ಇವತ್ತು ನಮ್ಮಲ್ಲಿ ಮಿಡಿಯಂ ಟರ್ಮ್ ಫಿಸಿಕಲ್ ಪ್ಲಾನ್ ಇದೆ. ಇದರಲ್ಲಿರುವುದನ್ನು ನಾವು ಓದಿದರೆ ಮಾನ್ಯ ಹಣಕಾಸಿನ ಸಚಿವರು ಗಮನ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ಸರ್ಕಾರದಿಂದ ಇನ್ವೆಸ್ಟ್‌ಮೆಂಟ್ ಆಗಿರುವುದು 7,984 ಕೋಟಿ ರೂಪಾಯಿಗಳು ಅನೇಕ ಉದ್ದಿಮೆಗಳಲ್ಲಿ ಬೇರೆ ಬೇರೆ ಸಾರ್ವಜನಿಕ ಉದ್ದಿಮೆಗಳಲ್ಲಿ ಕಂಪನಿಗಳಲ್ಲಿ ಹೆಚ್ಚು ಕಡಿಮೆ 8,000 ಕೋಟಿ ರೂಪಾಯಿಗಳನ್ನು ನಾವು ಇನ್ವೆಸ್ಟ್‌ಮೆಂಟ್ ಮಾಡಿದ್ದೇವೆ. ಅದರ ಜೊತೆಯಲ್ಲಿ ಸರ್ಕಾರದ ಔಟ್‌ಸ್ಟ್ಯಾಂಡಿಂಗ್ ಲೋನ್‌ಗಳಿವೆ ಅದರಲ್ಲಿ ನಾವು 5,200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಒಟ್ಟು ಎರಡು ಸೇರಿಸಿದರೆ 13,000 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಸರ್ಕಾರದಿಂದ

ಇವತ್ತಿನ ದಿವಸ ಬಂಡವಾಳವನ್ನು ಸಾಲವಾಗಿ ಕೊಟ್ಟಿರುವುದು ಆದರೆ ಇದರಿಂದ ನಮಗೆ ಬರುವಂತಹ ರಿಟರ್ನ್ ಎಷ್ಟಿದೆ. ಇದರಿಂದ ನಮಗೆ ಡಿವಿಡೆಂಟ್ ಆಗಿ ಅಥವಾ ಇಂಟ್ರೆಸ್ಟ್ ಆಗಿ ಬರುತ್ತಿರುವುದು ಪ್ರತಿವರ್ಷ ಕೇವಲ 100 ಕೋಟಿ ರೂಪಾಯಿಗಳು. ಅಂದರೆ 12,000 ಕೋಟಿ ಹಾಕಿರುವ ಬಂಡವಾಳಕ್ಕು ನಮಗೆ ವಾಪಾಸ್ ಬರುವ ಹಣ ಇಂಟ್ರೆಸ್ಟ್ ಇರಬಹುದು ಅಥವಾ ಡಿವಿಡೆಂಟ್ ಇರಬಹುದು ಕೇವಲ 100 ಕೋಟಿ ರೂಪಾಯಿಗಳು ಬರುತ್ತಿದೆ. ಹೆಚ್ಚು ಕಡಿಮೆ 0.76% ರಿಟರ್ನ್ ಇದೆ. ಬಹುಶ: ಸರ್ಕಾರದ ಆಡಳಿತವಿರಬಹುದು ಅಧಿಕಾರಿ ಗಳಿರಬಹುದು ಸಚಿವರುಗಳಿರಬಹುದು ಎಲ್ಲೋ ಒಂದು ಕಡೆ ಎಡವಿದ್ದೇವೆಂದರೆ ತಪ್ಪಾಗಲಾರದು. ಇದರ ಮೇಲೆ ನಿಯಂತ್ರಣ ಆಗಬೇಕಾದದ್ದು ಆಗಬೇಕಾಗಿದೆ ವಿಶೇಷವಾಗಿ ಸಾರ್ವಜನಿಕ ಉದ್ದಿಮೆಗಳು, ಸಾಕಷ್ಟು ನಷ್ಟದಲ್ಲಿ ನಡೆಯುತ್ತಿರುವುದು ನಮಗೆಲ್ಲರಿಗು ಗೊತ್ತಿರುವ ವಿಚಾರ, ಹಿಂದೆ ಸಮಿತಿಗಳನ್ನು ಕೂಡ ಮಾಡಿದರು. ಸಮಿತಿಯ ಮುಖಾಂತರ ಯಾವ್ಯಾವ ಉದ್ದಿಮೆಗಳು ಚೆನ್ನಾಗಿ ನಡೆಯುತ್ತಿದೆ, ಯಾವುದು ನಷ್ಟದಲ್ಲಿದೆ, ಯಾವುದನ್ನು ನಾವು ಪುನಶ್ಚೇತನ ಮಾಡಬಹುದು ಯಾವುದನ್ನು ನಾವೇನು ಮಾಡಿದರು ಸರಿಪಡಿಸುವುದಕ್ಕಾಗುವುದಿಲ್ಲ, ಮುಚ್ಚಬೇಕು, ಈ ರೀತಿಯಾಗಿ ಹಲವಾರು ವರದಿಗಳನ್ನು ತಯಾರುಮಾಡಿ ಆ ಬಗ್ಗೆ ಸರ್ಕಾರ ಒಂದು ರೀತಿಯ ನಿರ್ಧಾರಕ್ಕೆ ಬಂತು ಆದರೆ ನಂತರ ಆ ಬಗ್ಗೆ ಒಂದು ನಿರ್ದಿಷ್ಟವಾದ ಕ್ರಮ ತೆಗೆದುಕೊಂಡಿಲ್ಲ. ಇವತ್ತು ಕೂಡ ಉದ್ದಿಮೆಗಳು ಗೊಂದಲದಲ್ಲಿರತಕ್ಕಂಥ ವಿಚಾರ ನಮ್ಮ ಮುಂದೆ ಇದೆ. ಇವತ್ತು ಮೈಸೂರು ಲ್ಯಾಂಪ್ಸ್ ಮುಚ್ಚಬೇಕು ಎಂದು ಆಯಿತು. ಎನ್‌ಜಿಎಫ್ ಅನ್ನು ಮುಚ್ಚಬೇಕು ಎಂದು ಆಯಿತು. ಅನೇಕ ಬೇರೆ ಬೇರೆ ಉದ್ದಿಮೆಗಳನ್ನು ಇವತ್ತು ಪುನಶ್ಚೇತನ ಮಾಡಬೇಕು ಎಂದು ಕೂಡ ತೀರ್ಮಾನಗಳು ಆಯಿತು. ಆದರೆ ಇಲ್ಲಿ ಒಂದು ಇಚ್ಛಾಶಕ್ತಿಯ ಕೊರತೆ ಇದೆ ಎಂದು ನನಗೆ ಅನಿಸುತ್ತಿದೆ. ಇದನ್ನು ನಾವು ಸರಿ ಮಾಡಿಕೊಳ್ಳಬೇಕಾಗಿದೆ. ಬಹುಶ: ನಾನು ಹೇಳುತ್ತಿರುವುದು ಇಷ್ಟೆ ಮಾನ್ಯ ಅಧ್ಯಕ್ಷರೆ, ಒಂದು ಸರ್ಕಾರ ತೀರ್ಮಾನ ತೆಗೆದುಕೊಂಡ ಮೇಲೆ ಅದಕ್ಕೆ ಬದ್ಧತೆ ತೋರಿಸಬೇಕು. ಮುಚ್ಚಬೇಕು ಎಂದು ಹೇಳಿದ ಮುಚ್ಚೋಣ. ಅದರಿಂದ ನಮ್ಮಲ್ಲಿ ಆ ಜಮೀನಿನಿಂದ ಎಷ್ಟು ಹಣ ವಾಪಸ್ ತೆಗೆದುಕೊಳ್ಳಬಹುದು, ವಿಆರ್‌ಎಸ್ ಸ್ಕೀಮ್ ನಲ್ಲಿ ನಾವು ಎಷ್ಟು ಹಣ ಕೊಡಬೇಕಾಗಿದೆ ಎಂದು ತೀರ್ಮಾನ ತೆಗೆದುಕೊಂಡು ಅದರ ಬಗ್ಗೆ ಒಂದು ಖಡಾ ಖಂಡಿತವಾಗಿ ನಿರ್ಣಯ ತೆಗೆದುಕೊಳ್ಳಿ. ಈ ದ್ವಂದ್ವ ಮಾತುಗಳನ್ನು ನಾವು ಇಟ್ಟುಕೊಂಡಿದ್ದರೆ ಯಾರಿಗೂ ಕೂಡ ಒಳ್ಳೆಯದಾಗುವುದಿಲ್ಲ. ಆ ಉದ್ದಿಮೆಯನ್ನು ಕೂಡ ಪುನಶ್ಚೇತನ ಮಾಡಲು ಆಗುವುದಿಲ್ಲ. ನಮಗೂ ಕೂಡ ನಷ್ಟ ಹಾಗೆಯೇ ಮುಂದುವರಿದು ಕೊಂಡು ಹೋಗುತ್ತಿರುತ್ತದೆ. ಪ್ರತಿ ವರ್ಷ ನಾವು ದುಡ್ಡು ಕೊಡುತ್ತಲೇ ಇರಬೇಕು. ಮತ್ತು ನಮಗೆ ಇದೆಲ್ಲಾ ತೆರಿಗೆಯಿಂದ ಬರತಕ್ಕಂಥ ದುಡ್ಡು. ಇದು ಕೂಡ ಹಾಳಾಗುತ್ತಾ ಇರತಕ್ಕದ್ದು. ಆದ್ದರಿಂದ ನಾನು ಈ ಒಂದು ಬಜೆಟ್‌ನಲ್ಲಿ ಈ ವಿಚಾರದಲ್ಲಿ ಯಾವುದೇ ರೀತಿಯ ಪ್ರಸ್ತಾಪ ಆಗಿಲ್ಲ. ನಾನು ಮಾನ್ಯ ಸಚಿವರಲ್ಲಿ ಕೇಳಿ ಕೊಳ್ಳುವುದು ಇಷ್ಟೇ ತಮ್ಮ ರಿಪ್ಲೈ ನಾನು ಕೇಳತಕ್ಕದ್ದು, ಈ ಒಂದು ವಿಚಾರದಲ್ಲಿ ತಾವು ಒಂದು ನಿರ್ದಿಷ್ಟವಾದಂತಹ ನಿಲುವು ತೆಗೆದುಕೊಳ್ಳಬೇಕು. ಬಹುಶ: ನೀವು ಒಂದು ನಿರ್ಣಯ ತೆಗೆದುಕೊಳ್ಳಿ. ಯಾವುದನ್ನು ನಡೆಸಿಕೊಂಡು ಬಂದಿದ್ದೀರಿ? ಅಂತಹ ಸಂಸ್ಥೆಗಳಿಗೆ ನೀವು ಒಳ್ಳೊಳ್ಳೆಯ ಅಧಿಕಾರಿಗಳನ್ನು ಹಾಕಿ. ಅವರಿಗೆ ಜವಾಬ್ದಾರಿಯನ್ನು ಕೊಡಿ. ಇದನ್ನು ನೀವು ಸರಿಪಡಿಸಬೇಕು, ಟಾರ್ಗೆಟ್‌ಗಳನ್ನು ಕೊಡಿ. ಒಂದು ವರ್ಷದಲ್ಲಿ ಏನು ನಷ್ಟ ಇವತ್ತು ಆಗುತ್ತಿದೆ?

ಅದನ್ನು ಕಡಿಮೆ ಮಾಡಿ. ಅದನ್ನು ಇಂಪ್ರೂವ್ ಮಾಡಿ. "ಲಾಭ ಬರತಕ್ಕ ರೀತಿಯಲ್ಲಿ ನೀವು ನಡೆಸಿ" ಎಂದು ಅವರಿಗೆ ಹೇಳಿ ಇನ್ನೊಂದು ಕಡೆ ಯಾವ ಉದ್ದಿಮೆಯನ್ನು ನಡೆಸುವುದಕ್ಕೆ ಆಗುವುದಿಲ್ಲ. ಅಥವಾ ಅದನ್ನು ಮುಚ್ಚಿ ಸೇಲ್‌ಮಾಡಿ ಅಥವಾ ಯಾವುದಾದರೂ ಒಂದು ಖಾಸಗಿ ಕಂಪನಿಗೆ ನೀವು ಕೊಟ್ಟು ಬಿಡಿ. ಇವತ್ತು ಯಾವುದೋ ಒಂದು ನೂರು ಕಾರ್ಮಿಕರಿಗಾಗಿ ನಾವು ಕೋಟ್ಯಾಂತರ ರೂಪಾಯಿ ನಷ್ಟ ಮಾಡತಕ್ಕದ್ದು ಕೂಡ ಸರಿಯಲ್ಲ. ಕಾರ್ಮಿಕರ ಹಿತರಕ್ಷಣೆ ಕೂಡ ಇದೆ. ಅದರ ಜೊತೆಗೆ ಎಷ್ಟರಮಟ್ಟಿಗೆ ಹೊರೆಯನ್ನು ನಾವು ಹಾಕಿಕೊಳ್ಳಬೇಕಾಗುತ್ತದೆ, ಎಂಬುದನ್ನು ಯೋಚಿಸಬೇಕಾಗುತ್ತದೆ. ನಾನೇ ಹಿಂದಿನ ಸರ್ಕಾರದಲ್ಲಿ ಮೈಸೂರು ಲ್ಯಾಂಪ್ಸ್ ಬಗ್ಗೆ ಬಹಳಷ್ಟು ವಾದ ಮಾಡಿದ್ದೆ. ಇದನ್ನು ಉಳಿಸಬೇಕು ಎಂದು ವಾದ ಮಾಡಿದ್ದೆ. ಆದರೆ ಸರ್ಕಾರದ ಡಿಸಿಷನ್ ಆದ ಮೇಲೆ ಇವತ್ತು ಅದನ್ನು ಮುಚ್ಚಬೇಕು ಎಂದು ನಿರ್ಣಯ ಆಗಿದೆ. ನಿರ್ಣಯ ಆದಮೇಲೆ ಅಲ್ಲಿ ಜಮೀನು ಇದೆ. ಇವತ್ತು ಮೈಸೂರು ಲ್ಯಾಂಪ್ಸ್‌ದು ದೊಡ್ಡ ಜಮೀನು ಇದೆ. ಅದರಲ್ಲಿ ಈಗ ನಾವು ಏನಾದರೂ ಒಂದನ್ನು ನಾವು ಮಾಡಬಹುದು ಈ ರೀತಿಯ ಪ್ರತಿ ಒಂದು ವಿಚಾರಕ್ಕೂ ನಾನು ಹೊಗುವುದಿಲ್ಲ. ಆದರೆ ಅದರ ಬಗ್ಗೆ ಕೂಡ ಮಾನ್ಯ ಸಚಿವರು ಈ ಒಂದು ಬಜೆಟ್‌ನಲ್ಲಿ ಸೇರಿಸಿದರೆ ನಮಗೆ ಒಂದು ಕಡೆ ನಷ್ಟ ಆಗುತ್ತಿರುವುದು ಕಡಿಮೆ ಆಗುತ್ತದೆ. ಇನ್ನೊಂದು ಕಡೆ ನಮಗೆ ಆದಾಯ ಕೂಡ ಬರುತ್ತದೆ. ಇವತ್ತು 12,000 ಕೋಟಿ ರೂಪಾಯಿಯಲ್ಲಿ ಒಂದು ವರ್ಷಕ್ಕೆ ಕೇವಲ 100 ಕೋಟಿ ರೂಪಾಯಿ ಬರುತ್ತದೆ ಎಂದು ಹೇಳಿದರೆ ಯಾರೂ ಕೂಡ ಒಪ್ಪತಕ್ಕ ಮಾತಲ್ಲ. ಆದ್ದರಿಂದ ಇದನ್ನು ದಯವಿಟ್ಟು ಪರಿಶೀಲನೆ ಮಾಡಬೇಕು. ಎರಡನೆಯದು ವಿಚಾರ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಈ ಒಂದು ಶಿಕ್ಷಣ ಕ್ಷೇತ್ರದಲ್ಲಿನ ವಿಚಾರದಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮವಿದೆ. ಅದೊಂದು ಬಹಳ ಯಶಸ್ವಿ ಆಗಿರತಕ್ಕಂಥ ಕಾರ್ಯಕ್ರಮ. ಇವತ್ತು ಆ ಕಾರ್ಯಕ್ರಮ ಬಡ ಜನರ ಮಕ್ಕಳಿಗೆ ಇರತಕ್ಕದ್ದು. ಬಡ ಜನರು ಪುತ್ತೆ ಶಾಲೆಗೆ ಹೋಗತಕ್ಕದ್ದು ಆಗಿದೆ. ಮತ್ತು ಶಾಲೆಯಲ್ಲಿ ಇವತ್ತು ಡ್ರಾಪ್ ಔಟ್ಸ್ ಕಡಿಮೆ ಆಗಿದೆ, ಶಿಕ್ಷಣ ಗುಣ ಮಟ್ಟದಲ್ಲಿ ಕೂಡ ಇಂಪ್ರೂವ್ ಆಗಿದೆ. ಏಕೆಂದರೆ ಮಕ್ಕಳು ಊಟ ಮಾಡಿದಾಗ ಅವರ ಕಾನ್‌ಸೆಂಟ್ರೇಷನ್ ಕೂಡ ಜಾಸ್ತಿ ಆಗುತ್ತದೆ. ಪಾಠ ಕೇಳುತ್ತಾರೆ. ಹೊಟ್ಟೆ ಖಾಲಿ ಇರುವಾಗ ಏನು ಶಿಕ್ಷಕರು ಹೇಳುತ್ತಾರೆ, ಅದನ್ನು ಕೇಳುವುದಕ್ಕೆ ಕೂಡ ಮನಸ್ಸು ಇರುವುದಿಲ್ಲ. ಅದು ಹೊಟ್ಟೆ ತುಂಬಿದ್ದಾಗ ಆ ಒಂದು ಕಾನ್‌ಸೆಂಟ್ರೇಷನ್ ಗ್ರಾಸ್ಪಿಂಗ್ ಪವರ್ ಜಾಸ್ತಿ ಆಗುತ್ತದೆ. ಆ ದೃಷ್ಟಿಯಿಂದ ಹೇಳುತ್ತೇನೆ. ಹಿಂದಿನ ಸನ್ಮಾನ್ಯ ಧರ್ಮಸಿಂಗ್ ಅವರ ಕಾಲದಲ್ಲಿ ಅದನ್ನು 7ನೇ ತರಗತಿಯವರೆಗೆ ಮಾಡಿದ್ದರು. ಈ ಸಲ ಕೂಡ ನಮಗೆ ಹೆಚ್ಚು ಆದಾಯ ಇರುವಂತಹ ಸಂದರ್ಭದಲ್ಲಿ ನಾವೇಕೆ ಅದನ್ನು ಹೆಚ್ಚು ಮಾಡಬಾರದಾಗಿತ್ತು? ಹತ್ತನೇ ಕ್ಲಾಸ್‌ವರೆಗೂ ನಾವು ಮಾಡಬಹೂದಾಗಿತ್ತು. ಸರ್ಕಾರ ಮತ್ತು ಸರ್ಕಾರದಿಂದ ಏಡ್ ತೆಗೆದುಕೊಳ್ಳತಕ್ಕಂಥ ಸಂಸ್ಥೆಗಳಿಗೆ ಕೂಡ ಮಾಡಬಹುದಾಗಿತ್ತು. ಬಹುಶ: ಈ ಒಂದು ಎಜುಕೇಶನ್‌ಗೆ ಬಹಳ ಮುಖ್ಯವಾಗಿರತಕ್ಕ ಅಕ್ಷರ ದಾಸೋಹ ಕಾರ್ಯಕ್ರಮವನ್ನು ಮುಂದುವರಿಸಬೇಕು. ಮಾನ್ಯ ಸಚಿವರಾದಂತಹ ಯಡಿಯೂರಪ್ಪನವರಲ್ಲಿ ನಾನು ಮನವಿ ಮಾಡತಕ್ಕದ್ದು ಏನು ಅಂದರೆ ಇವತ್ತು ನಿಮ್ಮ ರಿಪ್ಲೈನಲ್ಲಿ ಇವತ್ತು 7ನೇ ತರಗತಿ ಏಂದೇನು ಇದೆ, ಕನಿಷ್ಟ 9ನೇ ತರಗತಿಯವರೆಗೆ ಎಂದು ಮಾಡಿಸಿ ಅಥವಾ

10ನೇ ತರಗತಿಯವರೆಗೆ ಸಂಪೂರ್ಣವಾಗಿ ಮಾಡಿಸಿ. ಇದು ಯಶಸ್ವಿ ಆಗಿರತಕ್ಕ ಕಾರ್ಯಕ್ರಮ. ಜನ ಮೆಚ್ಚತಕ್ಕಂಥ ಕಾರ್ಯಕ್ರಮ. ನಿಮಗೂ ಕೂಡ ಹೊಗಳುತ್ತಾರೆ. ಮತ್ತು ಎಲ್ಲರೂ ಕೂಡ ಒಪ್ಪತಕ್ಕಂಥದು. ಯಾರೂ ಕೂಡ ಇದು ಬೇಡ ಎಂದು ಹೇಳತಕ್ಕದ್ದು ಅಲ್ಲ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಪರಿಶೀಲನೆ ಮಾಡಿ. ಮತ್ತು ಇದನ್ನು ಮಾಡಬೇಕೆಂದು ಆಗ್ರಹ ಪಡಿಸುತ್ತಿದ್ದೇನೆ. ಅದರ ಜೊತೆಯಲ್ಲಿ ಈ ಒಂದು ಬಜೆಟ್‌ನಲ್ಲಿ ಹೈಸ್ಕೂಲುಗಳ ಬಗ್ಗೆ ಏನೂ ಪ್ರಸ್ತಾಪ ಆಗಿಲ್ಲ. ದಯವಿಟ್ಟು ನೀವು ಅದರ ಬಗ್ಗೆ ಕೂಡ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಡಿಗ್ರಿ ಕಾಲೇಜು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅದರೆ ಡಿಗ್ರಿ ಕಾಲೇಜಿಗಿಂತ ನಮಗೆ ಹೈಸ್ಕೂಲಿನ ಅವಶ್ಯಕತೆ ಹೆಚ್ಚು ಇದೆ. ಅದನ್ನೂ ಕೂಡ ನೀವು ಪ್ರೌಢಶಾಲೆಗಳನ್ನು ಪ್ರಾರಂಭಮಾಡಿ. ಮತ್ತೆ ಆಶ್ರಯ ಯೋಜನೆಯಲ್ಲಿ ನಾವು ಈ ವರ್ಷದಲ್ಲಿ ಮೂರು ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದಾರೆ. ಆದರೆ ಈ ಅರ್ಬನ್ ಆಶ್ರಯದಲ್ಲಿ ಬಹಳ ತೊಂದರೆ ಆಗುತ್ತಿದೆ. ಅದೂ ನಮ್ಮ ನಗರ ಪ್ರದೇಶ ಬೆಂಗಳೂರೇ ಇರಬಹುದು ಅಥವಾ ಸಿಟಿ ಮುನಿಸಿಪಾಲಿಟಿಗಳ ಲಿಮಿಟ್ಸ್ ಇರಬಹುದು ಅಥವಾ ಟೌನ್ ಮುನಿಸಿಪಾಲಿಟಿಗಳ ಲಿಮಿಟ್ಸ್ ಇರಬಹುದು. ಆಶ್ರಯ ಮನೆಗಳು ನಮಗೆ ಸಿಗುತ್ತಿಲ್ಲ. ಹಿಂದಿನ ಸರ್ಕಾರದಲ್ಲಿ 9 ಲಕ್ಷ ಮನೆಗಳನ್ನು ಕಟ್ಟಿದರು. ಆದರೆ ನನ್ನ ಕ್ಷೇತ್ರಕ್ಕೆ ಅಥವಾ ಬೆಂಗಳೂರು ನಗರದಲ್ಲಿ ಯಾರಿಗೂ ಮನೆ ಸಿಗಲಿಲ್ಲ. ಏಕೆಂದರೆ ನಮಗೆ ಜಮೀನು ಸಿಕ್ಕುವುದಿಲ್ಲ. ಮನೆ ಕಟ್ಟುವುದಕ್ಕೆ ಅವಕಾಶ ಸಿಗುವುದಿಲ್ಲ. ಇಲ್ಲಿರತಕ್ಕ ಬಡ ಜನರಿಗೆ ಅವಕಾಶ ಸಿಗುವುದಿಲ್ಲ. ಆದ್ದರಿಂದ ನಾವು ಹೊರಗಡೆ ಹೋಗಿ ಜಮೀನು ತೆಗೆದುಕೊಳ್ಳಬೇಕು ಎಂದು ಹೇಳಿದರೆ ಅದು ಬೇರೆ ಕ್ಷೇತ್ರ ಆಗುತ್ತದೆ. ಅಲ್ಲಿರತಕ್ಕ ಜನತೆ ಒಪ್ಪುವುದಿಲ್ಲ. ನಾನು ಈಗ ಯಲಹಂಕಾ ಕ್ಷೇತ್ರಕ್ಕೆ ಹೋಗಿ ಗಾಂಧಿನಗರದ ನಮ್ಮ ಜನರಿಗೆ ಕೊಡಿ ಎಂದರೆ ಇಲ್ಲಿರುವ ಜನ ಒಪ್ಪುವುದಿಲ್ಲ. ಅವರು ಗಲಾಟೆ ಮಾಡುತ್ತಾರೆ. ಆದರೂ ಕೂಡ ನಾನು ಹೇಗೋ ಮಾಡಿ ಒಟ್ಟು 150 ಜನರಿಗೆ ಮನೆ ಕೊಡಿಸಿದೆ. ಅದರೆ ನಾವು ಕೇಳುವಂತಹ, ಸರ್ಕಾರ ನಮ್ಮ ಸಹಾಯಕ್ಕೆ ಬರಬೇಕು. ಇವತ್ತು ನಮ್ಮ ಕ್ಷೇತ್ರದಿಂದ ಸಾಕಷ್ಟು ಜನ ಬಂದು ಕೇಳುತ್ತಾರೆ. "ನಮಗೆ ಮನೆಗಳು ಬೇಕು. ಆಶ್ರಯ ಯೋಜನೆಯಲ್ಲಿ ಲಕ್ಷಾಂತರ ಮನೆಗಳನ್ನು ಕಟ್ಟುತ್ತಿದ್ದಾರೆ. ಆದರೆ ನೀವ್ಯಾಕೆ ಕೊಡುತ್ತಿಲ್ಲ" ಎಂದು ಕೇಳಿದಾಗ ನಾವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಆಶ್ರಯ ಯೋಜನೆಯಲ್ಲಿ ನಮ್ಮ ಈ ಅರ್ಬನ್ ಆಶ್ರಯಕ್ಕೆ ಹೆಚ್ಚು ಸಹಾಯ ಆಗತಕ್ಕ ರೀತಿಯಲ್ಲಿ ನಮ್ಮ ಕ್ಷೇತ್ರದಲ್ಲಿ ಇಲ್ಲದೇ ಇದ್ದರೂ ಕೂಡ ಮತ್ತೊಂದು ಕ್ಷೇತ್ರದಲ್ಲಿ ಬೇರೆ ಕ್ಷೇತ್ರದಲ್ಲೂ ಕೂಡ ಕೊಡುವುದಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಕೊನೆಯ ಮಾತು ಹೇಳುತ್ತೇನೆ. ಇದು ಬಜೆಟ್‌ಗೆ ಹೆಚ್ಚು ಸಂಬಂಧಪಟ್ಟಿಲ್ಲ. ಆದರೂ ಹೇಳುತ್ತಿದ್ದೇನೆ. ನಮ್ಮಲ್ಲಿರತಕ್ಕ ಕೊಳಚೆ ಪ್ರದೇಶಗಳಲ್ಲಿ ಒಂದು ಸಮಸ್ಯೆ ಇದೆ. ಅವರಿಗೆ ನಾವು ಅವರ ಮನೆಗಳ ಮೇಲೆ ಅವರಿಗೆ ಹಕ್ಕುಪತ್ರ ಅಥವಾ ಖಾತೆಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಹೇಳಿದರೆ ಹೆಚ್ಚಿನ ಅಂಶ ಈ ಕೊಳಚೆ ಪ್ರದೇಶಗಳು ಇರತಕ್ಕದ್ದು ಖಾಸಗಿ ಜಮೀನಿನಲ್ಲಿ ಆ ಖಾಸಗಿ ಜಮೀನಿನ ಮಾಲೀಕರು ಏನು ಮಾಡುತ್ತಾರೆ? ಕೋರ್ಟಿನಲ್ಲಿ ಕೇಸು ನಡೆಯುತ್ತಿರುತ್ತದೆ. ನಾವು ಆ ಜಾಗವನ್ನು acquire ಮಾಡುವುದಕ್ಕೆ ಆಗುವುದಿಲ್ಲ. ಕೋರ್ಟಿಗೆ ಹೋದರೂ ಕೂಡ ಕೋರ್ಟ್ ಆದೇಶ ಕೊಡುತ್ತದೆ. ನೀವು ಈ ತರಹ ಜಮೀನು acquire ಮಾಡಿಕೊಂಡು ಅವರಿಗೆ ಪಾಪಾಸ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಆದರೆ ಸ್ಲಮ್ ಬೋರ್ಡ್‌ನಲ್ಲಿ acquire ಮಾಡಿಕೊಳ್ಳುವುದಕ್ಕೆ ದುಡ್ಡು ಇರುವುದಿಲ್ಲ.

ಆಗ ಅವರು ನಮ್ಮ ಕೈಯಲ್ಲಿ acquire ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿಯ ಒಂದು ತಕರಾರು ಏನು ಇರುತ್ತದೆ ಅದು ಮುಗಿಯುವುದೇ ಇಲ್ಲ. ಆ ಕೇಸು ಹಾಗೆಯೇ ನಡೆಯುತ್ತಿರುತ್ತದೆ. ಆದ್ದರಿಂದ ನಾನು ಕೇಳುತ್ತಿರುವುದು ಏನು ಎಂದರೆ ಇವತ್ತು ಬೆಂಗಳೂರು ನಗರದಲ್ಲಿ ಒಂದು ಟಿಡಿಆರ್ ಎನ್ನುವಂತಹ ಒಂದು ಸ್ಕೀಮನ್ನು ತಂದಿದ್ದೇವೆ. ಅಂದರೆ ರಸ್ತೆ ಅಗಲ ಮಾಡಿಕೊಳ್ಳುವುದಕ್ಕೆ ನಾವು ಯಾವುದೇ ಪ್ರಾಪರ್ಟಿ ಅಥವಾ ಜಾಗವನ್ನು ತೆಗೆದುಕೊಂಡರೆ ಅದಕ್ಕೆ ದುಡ್ಡು ಕೊಡುವುದಕ್ಕೆ ಹೋಗುವುದಿಲ್ಲ. ಅವರಿಗೆ ನಾವು ಟಿಡಿಆರ್ ಎಂದು ಹೇಳಿ ಒಂದು ಸರ್ಟಿಫಿಕೇಟ್ ಕೊಡುತ್ತೇವೆ. Transferable developmant rights ಎಂದು Corporation ಕಡೆಯಿಂದ ಕೊಡುತ್ತೇವೆ. ನಾವು ದುಡ್ಡು ಒಂದು ಪೈಸೆ ಕೊಡುವುದಿಲ್ಲ. ನಾವು ಟಿಡಿಆರ್ ಕೊಡುತ್ತೇವೆ. ಅವರು ಆ ಟಿಡಿಆರ್ ಮುಖಾಂತರ ಯಾವುದೇ ಒಂದು buliding ನ developers ಇರುತ್ತಾರೆ, ಅವರಿಗೆ ಹೋಗಿ ಅದನ್ನು ಮಾರಿದರೆ ಇನ್ನೂ ಒಂದು floor ಕಟ್ಟಿಕೊಳ್ಳತಕ್ಕ ಅವಕಾಶ ಅವರಿಗೆ ಇರುತ್ತದೆ. ಏನು F.A.R. ಜಾಸ್ತಿ. ಅವರಿಗೇನು sanction ಇರುತ್ತದೆ. ಅದಕ್ಕಿಂತ ಹೆಚ್ಚು ಬೆಲೆಗೆ ಅವನು ಮಾರಿಕೊಳ್ಳಬಹುದು. ಈ ರೀತಿ ಸ್ಕೀಮನ್ನು ನಾವು ತಂದಿದ್ದೇವೆ. ಆದರೆ ಇದೇ ಒಂದು ಸ್ಕೀಮನ್ನು ನಮ್ಮ ಕೊಳಚೆ ಪ್ರದೇಶದಲ್ಲಿ ಇರತಕ್ಕಂಥ ಸ್ಲಮ್ ಜಾಗಗಳಿಗೆ ಜಾರಿಗೆ ತರುವ ಬಗ್ಗೆ ಒಂದು ಪ್ರಪೋಸಲ್ ತರಬೇಕೆಂದು ಮನವಿ ಮಾಡಿದ್ದೇವೆ. ಬೆಂಗಳೂರು ಶಾಸಕರೆಲ್ಲಾ ಸೇರಿ ಈ ಮನವಿ ಮಾಡಿದ್ದೇವೆ. ನಮ್ಮ ಮನವಿ ಏನೆಂದರೆ ನೀವು ಈ ಸ್ಕೀಮನ್ನು ಕೊಳಚೆ ಪ್ರದೇಶಗಳ ಅಭಿವೃದ್ಧಿಗೋಸ್ಕರ ಯಾರು ಮಾಲೀಕರು ಇರುತ್ತಾರೆ. ಅವರಿಗೆ ನಾವು ದುಡ್ಡು ಕೊಡುವುದು ಬೇಕಾಗಿಲ್ಲ, ಅವರಿಗೆ ಟಿಡಿಆರ್ ಕೊಡಬೇಕು. ಅವರೂ ಕೂಡ ಇದಕ್ಕೆ ಒಪ್ಪಿ ಕೊಳ್ಳುತ್ತಾರೆ ಅವರು ಸಹ ಕೋರ್ಟಿನಲ್ಲಿ ಕೇಸು ನಡೆಯುತ್ತಿರುತ್ತದೆ ಅದನ್ನು withdraw ಮಾಡಿಕೊಳ್ಳುತ್ತಾರೆ. ನಮಗೂ ಕೂಡ ಜಮೀನು ಸಿಗುತ್ತದೆ. ಅವರಿಗೆ ಟಿಡಿಆರ್ ಸಿಗುತ್ತದೆ. ಅದನ್ನು ಅವರು ಉಪಯೋಗಿಸಿಕೊಳ್ಳುತ್ತಾರೆ. ಆದ್ದರಿಂದ ಇದನ್ನು ಕೂಡ ತಾವು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ನಾನು ಹೆಚ್ಚು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಇಷ್ಟು ಮಾತುಗಳನ್ನು ಹೇಳಲು ತಾವು ಅವಕಾಶ ಮಾಡಿಕೊಟ್ಟಿದ್ದಕ್ಕೆ ನಾನು ತಮಗೂ ವಂದಿಸುತ್ತೇನೆ. ಮಾನ್ಯ ಯಡಿಯೂರಪ್ಪ ಸಾಹೇಬರು ಕೂಡ ನಾನು ಹೇಳಿರತಕ್ಕ ಮಾತುಗಳ ಬಗ್ಗೆ ತಮ್ಮ ಉತ್ತರದಲ್ಲಿ ಪ್ರಸ್ತಾಪ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ನೆ.ಲ.ನರೇಂದ್ರ ಬಾಬು ಅವರು ಮಾತನಾಡಿ.

ಶ್ರೀ ಹೆಚ್.ಡಿ.ಬಸವರಾಜು: ಅಧ್ಯಕ್ಷರೆ, ತಾವು ಈ ಭಾಗಕ್ಕೆ ನೀವು ಕೊಡುವುದಿಲ್ಲ ಎಂದು ತೀರ್ಮಾನ ಮಾಡಿದ ಹಾಗೆ ಕಾಣಿಸುತ್ತದೆ. ಇಲ್ಲ ಆ ಭಾಗದಲ್ಲಿ ಮಾತ್ರ ಕೊಡುತ್ತಿದ್ದೀರಿ. ಈಗ ನೋಡಿ ಗೆರೆ ದಾಟಿದ ಭಾಗದಿಂದ ಅಚೆಗೆ ಅವಕಾಶ ಕೊಡುತ್ತಿದ್ದೀರಿ. ನಾವೇನು ಮಾಡಬೇಕು?

ಶ್ರೀ ನೆ.ಲ.ನರೇಂದ್ರ ಬಾಬು: ಮಾನ್ಯ ಅಧ್ಯಕ್ಷರೆ, ಕಳೆದ ಎರಡು ಆಯವ್ಯಯದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಸಿಗಲಿಲ್ಲ.

ಶೀ ಕೆ.ಆರ್. ರಮೇಶ್ ಕುಮಾರ್: ಏನಾದರೂ ಒಂದು ಉದ್ದೇಶ ಸಾರ್ಥಕ ಆಗಬೇಕು. ಮಾನ್ಯ ಯಡಿಯೂರಪ್ಪನವರು ಬಜೆಟ್‌ಗೆ ಸಂಬಂಧಿಸಿದಂತೆ ಏನಾದರೂ ರೆಲಿವೆಂಟ್ ಇಶ್ಯೂಸ್ ಇದ್ದರೆ ನೋಟ್ ಮಾಡಿಕೊಂಡು ಅದನ್ನು ನಾಳೆ ರಿಪ್ಲೈ ಮಾಡುವಾಗ ಹೇಳುತ್ತಾರೆ. ಬೇರೆ ಯಾರೂ

ಇಲ್ಲಿ ಇಲ್ಲ. ಮಾನ್ಯ ದಿನೇಶ್ ಗುಂಡೂರಾವ್ ಅವರು ಸ್ಲಮ್ಸ್ ವಿಚಾರ ಇನ್ನೊಂದು ಮಾತನಾಡಿದರು. ಅವರಿಗೆ ಮಾತನಾಡುವಾಗ ಏನೋ ಒಂದು ಹೊಸ ಹುಮ್ಮಸ್ಸು ಒಂದು ಉತ್ಸಾಹ ಏನೋ ಹೇಳಬೇಕು ಎಂದು ಹೇಳುತ್ತಾರೆ. ನಾಳೆ ಅದಕ್ಕೆ ಪ್ರತಿಕ್ರಿಯೆನೇ ಇರುವುದಿಲ್ಲ. Simply it goes into record what are we transacting here? To satisfy them, ಅವರಿಗೆ ಒಂದು ಚಪಲ, ಬಾಯಿ ಚಪಲ ತೀರಿಸಿಕೊಳ್ಳುವುದಕ್ಕೆ ಅವರು ಮಾತನಾಡುವುದು.....

ಶ್ರೀ ದಿನೇಶ್ ಗುಂಡೂರಾವ್: ಬಾಯಿ ಚಪಲ ಅಲ್ಲ ಸಾರ್. ನಾವು ಉತ್ತರ ಕೇಳಬೇಕು ಎಂದು ಇದ್ದೇವೆ.

ಒಬ್ಬ ಮಾನ್ಯ ಸದಸ್ಯರು: ಚಪಲದ ವಿಷಯವಲ್ಲ ಸಾರ್. ನಮ್ಮ ಹತ್ತಿರ ಒಳ್ಳೊಳ್ಳೆಯ ವಿಷಯಗಳು ಇದ್ದಾವೆ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್: ದಯಮಾಡಿ ಕೇಳಿ ನೀವು ಅರ್ಥ ಮಾಡಿಕೊಳ್ಳುತ್ತಿಲ್ಲ. ದಯಮಾಡಿ ಕೇಳಿರಿ. ನಾನು ನಿಮ್ಮ ಪರವಾಗಿಯೇ ಮಾತನಾಡುತ್ತಿದ್ದೇನೆ ನಾನೇನು ಹೇಳುತ್ತಿದ್ದೇನೆಂದರೆ ನೀವು ಹೇಳಿದಂತಹ ಮಾತುಗಳಿಗೆ ಜವಾಬ್ದಾರಿಯುತವಾದಂತಹ ಪ್ರತಿಕ್ರಿಯೆ ಕೊಡುವವರು ಯಾರೂ ಇಲ್ಲದೇ ಹೋದರೆ ಬಾಯಿ ಚಪಲಕ್ಕೆ ಮಾತನಾಡಿದಂತೆ ಆಗುತ್ತದೆ ಎಂದು ನಾನು ನಿಮ್ಮ ಪರವಾಗಿ ಮಾತನಾಡುತ್ತಿರುವುದು. ನಾನು ಯಾವತ್ತೂ ನಿಮ್ಮ ಪರವಾಗಿ ಇರುವವನು. ನೀವು ಬರೆದು ಇಟ್ಟುಕೊಳ್ಳಿ. ನಾನು ಅಲ್ಲಿದ್ದಾಗಲೂ ಅದೇ ಕೆಲಸ ಮಾಡಿದ್ದೆ. ಈಗ ಪಾಪ ಅವರು ಮಾತನಾಡುತ್ತಾರೆ. ಪ್ರತಿಕ್ರಿಯೆ ಇರುವುದಿಲ್ಲ. ಏನು ಪ್ರಯೋಜನ? ಪತ್ರಿಕೆಯವರಿಗೂ ಸಾಕಾಗಿರುತ್ತದೆ. ಯಾರು ಕವರ್ ಮಾಡುತ್ತಾರೋ? ಯಾರು ಕವರ್ ಮಾಡುವುದಿಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಯಡಿಯೂರಪ್ಪನವರಿಗೆ ಈಗೆಲ್ಲಾ ಮಾನ್ಯ ಸಿದ್ಧರಾಮಯ್ಯನವರು ಮಾನ್ಯ ಖರ್ಗೆ ಸಾಹೇಬರು, ಮಾನ್ಯ ವಾಟಾಳ್ ನಾಗಾರಾಜ್ ಅವರು ಹೇಳಿದ್ದಕ್ಕೆ ಉತ್ತರ ಕೊಟ್ಟರೆ ಸಾಕಾಗುತ್ತದೆ ಮಾನ್ಯ ದಿನೇಶ್ ಗುಂಡುರಾವ್ ಹೇಳಿದ್ದಕ್ಕೆ ಮಾನ್ಯ ಬಾಬು ಅವರು ಹೇಳಿದ್ದಕ್ಕೆ ಉಳಿದವರು ಹೇಳಿದ್ದಕ್ಕೆ ಏನು ಉತ್ತರ ಕೊಡುತ್ತಾರೆ?

ಶ್ರೀ ವಾಟಾಳ್ ನಾಗರಾಜ್: ನೀವು ಹೇಳಿದ್ದಕ್ಕೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನೇನೂ ಹೇಳಲಿಕ್ಕೆ ಹೋಗಿಲ್ಲ. ನಾಳೆ ಒಂದು ಅರ್ಧಘಂಟೆ ಮಾತನಾಡಲು ಅವಕಾಶ ಮಾಡಿ. ನಿಮ್ಮ ನಿಜವಾದ ಅಭಿಮಾನ ಇಲ್ಲಿ ಯಾರಾದರೂ ಇದ್ದರೆ ನಾನೇ. ಇಲ್ಲವೆಂದರೆ .....

ಶ್ರೀ ಬಿ.ಎಸ್.ಯಡಿಯೂರಪ್ಪ: ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಆಗಿರುವ ತೀರ್ಮಾನಗಳಿಗೆ ಸ್ಯಾಂಕ್ಷನ್ ಹೊರಟುಹೋಯಿತು ನಾನೊಂದು ಮಾತನ್ನು ನಿಮಗೆ ಹೇಳುತ್ತೇನೆ. ನಿನ್ನೆ ಕುಳಿತುಕೊಂಡೆವು ನನ್ನ ದೃಷ್ಟಿಯಿಂದ ಇವತ್ತು ಒಳ್ಳೆಯ ದಿವಸ ಮೂರು ಗಂಟೆಗೆ ಉತ್ತರ ಕೊಡಬೇಕು. ಎರಡು ಆಯಿತು, ನಾಲ್ಕು ಆಯಿತು. ಐದು ಆಯಿತು. ಆರು ಆಯಿತು. ನಮ್ಮ ಪ್ರತಿಪಕ್ಷದ ನಾಯಕರು ಇಲ್ಲಾ ಇದು ಮುಂದುವರಿಯಬೇಕು, ಎಲ್ಲರಿಗೂ ಅವಕಾಶ ಇದೆ ಎಂದು

ಹೇಳಿದಮೇಲೆ ಆಯಿತು ಎಂದೆ. ಇದನ್ನು ಮುಗಿಸೋಣ. ರಾತ್ರಿ ಒಂಭತ್ತಾಗಲಿ, ಒಂಭತ್ತೂವರೆ ಆಗಲಿ. ನಿಮಗೆ ಗೊತ್ತಿದೆ. ನಿಮಗೆ ಅನುಭವ ಇದೆ. ಲೋಕಸಭೆಯಲ್ಲಿ ರಾತ್ರಿ 12 ಗಂಟೆಗೆ 1 ಗಂಟೆಗೆ ಪಾಸಾದ ಉದಾಹರಣೆಗಳಿಲ್ಲವೇನು? ಇವತ್ತು ಯಾರು ಮಾತನಾಡುತ್ತಾರೋ ಮಾತನಾಡಲಿ. ನಾನು ನಾಳೆ ಬೆಳಿಗ್ಗೆ ಒಂಭತ್ತು ಗಂಟೆಗೆ ಉತ್ತರವನ್ನು ಕೊಡುತ್ತೇನೆ. ರಿಪ್ಲೈ ಮಾಡುವವನಿದ್ದೇನೆ. ಅದರಲ್ಲೇನು ಬೇರೆ ವ್ಯತ್ಯಾಸವನ್ನು ಮಾಡದೆ ಈಗ ಮಾತನಾಡಲಿ. ಮತ್ತೆ ಅದಕ್ಕೇನಾದರು ತಾವು ಒಂದು ವೇಳೆ ಅಡ್ಡಿ ಮಾಡಿದರೆ ನಾಳೆ ನಮ್ಮ ವ್ಯವಸ್ಥೆ ಎಲ್ಲಾ ತೊಂದರೆಗೆ ಒಳಗಾಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಬೇರೆ ಮಂತ್ರಿಗಳೆಲ್ಲಾ ಇದ್ದಾರಲ್ಲ. ಏನು ರಾಜಕಾರ್ಯ ಇದೆ? ಅಧಿವೇಶನ ನಡೆಯುವಾಗ . . . .

ಶ್ರೀ ಬಿ.ಎಸ್.ಯಡಿಯೂರಪ್ಪ: ರಾಜ್ಯಸಭಾ ಚುನಾವಣೆಯಾಯಿತು. ಏನು ಮಾಡುವುದಕ್ಕೆ ಬರುವುದಿಲ್ಲ. ಅನಿವಾರ್ಯ ಪ್ರಸಂಗ. ಅದಕ್ಕೋಸ್ಕರ ನಾವು ಇಲ್ಲಿ ಕೆಲವರು ಕೂತಿದ್ದೇವೆ. ಏನು ಮಾಡುತ್ತೀರಿ ಹೇಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಹೊಸ ಸರ್ಕಾರ. ತಾವು ಇಲ್ಲಿ ಬದಲಾಯಿತೇ ಹೊರತು ತಾವು ರಿಪ್ಲೈ ಕೊಡುವುದಕ್ಕೆ ಷೆಡ್ಯೂಲ್ಡ್ ಪ್ರೋಗ್ರಾಮ್ ಅವೆಲ್ಲಾ ಜವಾಬ್ದಾರಿ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಇದ್ದೇನೆ. ನಮ್ಮ ಅಧಿಕಾರಿಗಳಿದ್ದಾರೆ. ನೋಟ್ಸ್ ಮಾಡಿಕೊಳ್ಳುತ್ತಿದ್ದೇವೆ. ಉತ್ತರವನ್ನು ಕೊಡುತ್ತೇವೆ.

ಶ್ರೀ ನೆ.ಲ.ನರೇಂದ್ರ ಬಾಬು: (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ ಮೊದಲನೆಯದಾಗಿ ನಮ್ಮ ನಾಯಕರಿಗೆ ಕೃತಜ್ಞತೆ ಹೇಳುತ್ತಾ ಏಕೆಂದರೆ ಬಹಳಷ್ಟು ನಮ್ಮ ಅಭಿಪ್ರಾಯಗಳನ್ನು ಇಲ್ಲಿ ಹೇಳ ಬೇಕಾಗಿದೆ ಆಯವ್ಯಯದ ಬಗ್ಗೆ ಕೆಲವು ಸಲಹೆಗಳನ್ನು ಕೊಡಬೇಕೆಂದು ಹೇಳಿ ನಾನು ಅಧ್ಯಯನ ಮಾಡಿದ್ದೇನೆ ಹಾಗೂ ನಮ್ಮ ಕ್ಷೇತ್ರದಲ್ಲಿನ ಅನುಭವಗಳನ್ನು ಹಂಚಿಕೊಳ್ಳಬೇಕೆನ್ನುವ ಕುತೂಹಲದಿಂದ ಕಳೆದೆರಡು ಬಾರಿ ಮಾತನಾಡಲಿಕ್ಕಾಗದೇ ಈ ಬಾರಿ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ನಿಮಗೆ ಕೃತಜ್ಞತೆಗಳನ್ನು ಹೇಳಲಿಕ್ಕೆ ನಾನು ಬಯಸುತ್ತೇನೆ. ಈಗಷ್ಟೇ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರು. ನಾನು ಬೆಳಿಗ್ಗೆ, ಸಂಜೆ ಅಲ್ಲಿ ಹೋಗಿ ನೋಡಿದೆ. ಯಾವ ಯಾವ ಅಧಿಕಾರಿಗಳು ಸಹಿಯನ್ನು ಹಾಕಿದ್ದಾರೆ? ಎಷ್ಟು ಜನರು ಬಂದಿದ್ದಾರೆ ಎಂಬ ವಿವರಗಳನ್ನು ನೋಡಿದ್ದೇನೆ. ಸನ್ಮಾನ್ಯ ಯಡಿಯೂರಪ್ಪ ನವರು ಹೇಳಿದರು ಬೇರೆ ಬೇರೆ ಕಾರ್ಯಕ್ರಮಕ್ಕೆ ಮಂತ್ರಿಗಳು ಹೋಗಿದ್ದಾರೆಂದು ಹೇಳಿ. ಅಧಿಕಾರಿಗಳಿಗೇನು ಕೆಲಸ ಇದೆ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡಿ ಉತ್ತರವನ್ನು ತಾವು ಕೊಡುವ ಸಂದರ್ಭದಲ್ಲಿ ಹೇಳಬೇಕು. ಯಡಿಯೂರಪ್ಪನವರು ಹಲವಾರು ಸಂದರ್ಭದಲ್ಲಿ ಈ ಕಡೆ ಕೂತು ಹೇಳಿದ್ದನ್ನು ನಾನು ಕಂಡಿದ್ದೇನೆ. ಅಧಿಕಾರಿಗಳು ಎಲ್ಲಿಯವರೆಗೂ ಕೆಲಸ ಗಳನ್ನು ಸಲಹೆಗಳನ್ನು ಈ ಜವಾಬ್ದಾರಿಯುತ ಸದನದಲ್ಲಿ ಕೊಡತಕ್ಕ ಸಂದರ್ಭದಲ್ಲಿ ಇರುವುದಿಲ್ಲ, ಬಹುಶ ನಾನು ಹೇಳುತ್ತೇನೆ, ಯಾವುದೇ ರಾಜ್ಯದ ಪ್ರಗತಿ, ರಾಷ್ಟ್ರದ ಪ್ರಗತಿಯಾಗುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದನ್ನು ಬಹಳ ಗಂಭೀರವಾಗಿ ಅರ್ಥಸಚಿವರಾದ ಮಾನ್ಯ ಉಪ ಮುಖ್ಯಮಂತ್ರಿಗಳು ಪರಿಗಣಿಸಬೇಕೆಂದು ಹೇಳುತ್ತೇನೆ. ಇವತ್ತು ಈ ಒಂದು ರಾಜ್ಯದ ನೂತನ ಸಮ್ಮಿಶ್ರ ಸರ್ಕಾರ ಮಂಡನೆ ಮಾಡಿರುವ ಬಜೆಟ್‌ನಲ್ಲಿ ನಿಜವಾಗಲೂ ಒಂದು ರೀತಿಯಾದ ಮಾಸ್ ಮತ್ತು ಕ್ಲಾಸ್‌ಗೆ ಒತ್ತನ್ನು

ಕೊಟ್ಟಿದ್ದರೂ ಸಹಾ ರೆವಿನ್ಯೂಗೆ ಆ ಬೇಸಿಸ್ ಏನು ಬೇಕಿತ್ತು broader basis ಏನು ಬೇಕಿತ್ತು, ಅದು ಹೆಚ್ಚು ಕಾಣುತ್ತಿಲ್ಲ. ಬಹುಶ ಇದರ ಬಗ್ಗೆ ಹೆಚ್ಚು ಒತ್ತನ್ನು ಕೊಟ್ಟಿದ್ದರೆ ಈ ಎಲ್ಲಾ ಕನಸುಗಳನ್ನು ನನಸು ಮಾಡಲಿಕ್ಕೆ ಸಾಧ್ಯವಾಗುತ್ತಿತ್ತು ಎನ್ನುವ ಮಾತನ್ನು ಹೇಳುತ್ತೇನೆ. ಮಹಿಳೆಯರಿಗೆ ಹೆಚ್ಚು ಒತ್ತನ್ನು ಕೊಟ್ಟಿದೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಬಹುಶ ಶ್ರೀ ಎಸ್.ಎಂ.ಕೃಷ್ಣ ಅವರು ಇದ್ದಾಗ, ನನಗೆ ಚೆನ್ನಾಗಿ ನೆನಪಿದೆ, ಅಂಗನವಾಡಿಯ ಶಿಕ್ಷಕಿಯರಿಗೆ ಒಂದು ಗ್ಯಾಸ್ ಕನೆಕ್ಷನನ್ನು ಕೊಡುತ್ತೇವೆಂದು ಹೇಳಿ ಭರವಸೆಯನ್ನು ಕೊಟ್ಟಿದ್ದುದು ಮತ್ತು ಕೇಂದ್ರ ಸರ್ಕಾರದಿಂದ ಸಹಕಾರದೊಂದಿಗೆ ಮತ್ತು ಆಶ್ರಯ ಮನೆಗಳನ್ನು ಸಹಾ ಕೊಡುವ ಯೋಜನೆಯನ್ನು ಶ್ರೀ ಎಸ್.ಎಂ.ಕೃಷ್ಣ ಅವರು ಕಾಂಗ್ರೆಸ್ ಸರ್ಕಾರದಲ್ಲಿ ಕೊಟ್ಟಿದ್ದನ್ನು ಈ ಸಂದರ್ಭದಲ್ಲಿ ನೆನೆಪು ಮಾಡಿಕೊಳ್ಳುವುದಕ್ಕೆ ನಾನು ಬಯಸುತ್ತೇನೆ. ನಮ್ಮಲ್ಲಿ ಬಹಳ ಮುಖ್ಯವಾಗಿರುವುದೆಂದರೆ ಈ ಸೋರಿಕೆ. ರೆವಿನ್ಯೂ ಸೋರ್ಸ್‌ನಲ್ಲಿ ಬರುವ ಸೇಲ್ಸ್ ಟ್ಯಾಕ್ಸ್ ಆಗಲಿ, ಕಮರ್ಷಿಯಲ್ ಟ್ಯಾಕ್ಸ್ ಆಗಲಿ, ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಇದನ್ನು ಪ್ರಾಕ್ಟಿಕಲ್ ಆಗಿ ನಮ್ಮ ಮಾಜಿ ಉಪ ಮುಖ್ಯಮಂತ್ರಿಗಳು ಹೇಳುವಾಗ ಹೇಗೆ ಸೋರಿಕೆಗಳಾಗುತ್ತಿವೆಯೆಂದು ಬಹಳ ಚೆನ್ನಾಗಿ ಹೇಳಿದರು. ಹತ್ತು ಲಾರಿ ಈರುಳ್ಳಿ ಹೋದರೆ ಲೆಕ್ಕ ಸಿಗುವುದು ಮೂರೆ ಲಾರಿಯದು. ಇದರ ಬಗ್ಗೆ ಬಹುಶ ಆಧುನಿಕ ತಂತ್ರಜ್ಞಾನವನ್ನು ಟೋಲ್ ಗೇಟ್‌ಗಳಲ್ಲಿ ಅಳವಡಿಸುವುದರ ಮುಖೇನ ಬಹುಶಃ ನಾವು ಹೇಗೆ ಬಾರ್ ಕೋಡಿಂಗ್‌ನಲ್ಲಿ ಎಷ್ಟು ಮೂವ್‌ಮೆಂಟ್ ಆಯಿತು ಎಂದು ಲೆಕ್ಕ ಇಡುವುದಕ್ಕೆ ಸಾಧ್ಯವೋ ಆ ರೀತಿಯಾಗಿ ಪ್ರಾಕ್ಟಿಕಲ್ ಆಗಿ ಮಾಡುವುದು ಸೂಕ್ತ ಇದೆ. ಹಿಂದೆ ಅಕ್ಟಾಯ್ ಇದ್ದಾಗ ಪ್ರತಿಯೊಂದು ಊರಿಗೆ ನಗರಕ್ಕೆ ರಾಜ್ಯಕ್ಕೆ ಬರುತ್ತಿದ್ದ ವಹಿವಾಟುಗಳು ಬಹಳ ಸುಲಲಿತವಾಗಿ ಗೊತ್ತಾಗುತ್ತಿತ್ತು. ಇವತ್ತು ಅದರಲ್ಲಿ ಬಹಳಷ್ಟು ಸೋರಿಕೆ ಇದೆ. ಅದನ್ನು ತಡೆಗಟ್ಟುವುದಕ್ಕೆ ಮಾನ್ಯ ಅರ್ಥ ಸಚಿವರನ್ನು ಒತ್ತನ್ನು ಕೊಡಬೇಕೆಂದು ಹೇಳುತೇ.ನೆ. ಮತ್ತು ಇವತ್ತು ಹಲವಾರು ಯೋಜನೆಗಳಲ್ಲಿ 'ಭಾಗ್ಯಲಕ್ಷ್ಮಿ' ಯೋಜನೆ ಎನ್ನುವುದು ನಿಜವಾಗಿಯೂ ಸ್ವಾಗತಾರ್ಹ ಹಿಂದೆ ಬಾಲಿಕಾ ವೃದ್ಧಿ ಯೋಜನೆ ಎಂದು ಹೇಳಿ ಬಹುಶ ನಮ್ಮ ಹಿಂದಿನ ಸರ್ಕಾರ ಮಾಡಿತ್ತು. ಅದಕ್ಕೆ ಹೊಸ ಹೆಸರನ್ನು ಕೊಟ್ಟಿದ್ದಾರೆ. ಏನೇ ಆಗಲಿ. ಇದೊಂದು ಒಳ್ಳೆಯ ಯೋಜನೆಯಾದರೂ ಸಹಾ ಒಂದು ಸಂಶಯ ಬರುತ್ತದೆ 18 ವರ್ಷ ಒಳಗಡೆ ಏನಾದರೂ ಆಕೆ ಕಾಲವಾದರೆ ಅಥವಾ ಆಕಸ್ಮಿಕವಾಗಿ ಹೆಣ್ಣುಮಕ್ಕಳ ಭ್ರೂಣಹತ್ಯೆಯಾದರೆ ದುಡ್ಡು ಬರುತ್ತೆ ಎಂದು ಯಾರಾದರೂ ಆ ಹೆಣ್ಣುಮಗುವನ್ನು ಕೊಲ್ಲುವ ಪ್ರಯತ್ನವನ್ನು ಮಾಡಿದರೆ, ಬಹುಶ ಈ ಸಮಸ್ಯೆಗೆ ನಮ್ಮ ಕಾನೂನು ನಿಯಮಾವಳಿಗಳನ್ನು ಮಾಡುವಾಗ ಸರಿಯಾಗಿ ಪರಿಹಾರ ಮಾಡಿದರೆ ಬಹುಶಃ ಇಂಥ ಅನಾಹುತಗಳು ಸಂಭವಿಸಲಿಕ್ಕೆ ಸಾಧ್ಯವಿರುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲು ಬಯಸುತ್ತೇನೆ. ಮತ್ತು ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಬಹುಶಃ ನಾನು ಅಡಿಟ್ ರಿಪೋರ್ಟ್‌ನ್ನು ನೋಡುತ್ತಿದ್ದೆ. ಅಲ್ಲಿ ಕಂಡು ಬಂದ ಅಂಶವೇನೆಂದರೆ ಸಿಎಜಿ ವರದಿ ಪ್ರಕಾರ 2004–05 ರಲ್ಲಿ ಬಹುಶಃ ತೋಟಗಾರಿಕೆಯಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರೆಗೂ ಪ್ರಕರಣಗಳ ತನಿಖೆಗಳು 220 ಪ್ರಕರಣಗಳು 9 ಕೋಟಿ 78 ಲಕ್ಷದ 64 ಸಾವಿರ. ಇಷ್ಟು ದುರ್ವಿನಿಯೋಗವಾಗಿರುವುದು ಕಂಡುಬಂದಿದೆ. ಬಹುಶ: ಇದನ್ನೆಲ್ಲಾ ನಾವು ಆಡಿಟನ್ನು ರಿವ್ಯೂ ಮಾಡುವಾಗ, ಅದನ್ನು ಹೇಗೆ ಕ್ಯಾರಿ ಓವರ್ ಮಾಡುತ್ತೀರಿ? ಈ ಪ್ರಶ್ನೆಗೆ ಉತ್ತರವನ್ನು

ಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತೇನೆ. ಮತ್ತು ಸಕ್ರಮಗೊಳಿಸಬೇಕಾದ ಹೆಚ್ಚುವರಿ ಬಗ್ಗೆ ಹೇಳುತ್ತೇನೆ. ಬಹುಶ: ಯಾವುದೇ ರೀತಿಯಾದ ಸ್ಯಾಂಕ್ಷನ್‌ಗಳಿಲ್ಲದೆ ಭಾರತ ಸಂವಿಧಾನ 205ನೇ ಅನುಚ್ಛೇದದ ಮೇರೆಗೆ, ರಾಜ್ಯಸರ್ಕಾರ ಅನುದಾನ ವಿನಿಯೋಗದ ಅಡಿಯಲ್ಲಿ 6931 ಕೋಟಿ ರೂ ಹೆಚ್ಚು ಖರ್ಚು ಮಾಡಿರುವುದು, ಇದನ್ನು ಇದುವರೆಗೂ ಸಕ್ರಮಗೊಳಿಸಿಯೇ ಇಲ್ಲ. 1989–90 ರಿಂದ ಹಾಗೆಯೇ ಬರುತ್ತಿದೆ. ಇದಕ್ಕೆ ಹೇಗೆ ಉತ್ತರ ಕೊಡುವುದು? ಬಹುಶಃ ಯಾರು ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾರೆ? ಇದರ ಬಗ್ಗೆ ನಾವು ಜನಗಳಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ಸರ್ಕಾರದ ಜವಾಬ್ದಾರಿ ಹೊತ್ತಿರತಕ್ಕಂಥವರು ಬಹುಶ 89 ರಿಂದ ಇಲ್ಲಿಯವರೆಗೂ ಯಾವುದೇ ಲೆಕ್ಕಕ್ಕೆಸಿಗದೆ ಹೋಗಿರತಕ್ಕದ್ದು ಆಶ್ಚರ್ಯ ಸಂಗತಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ವಿಚಾರದ ಬಗ್ಗೆ ಇದೇ ರೀತಿ ಅರ್ಥ ಸಚಿವರಿಗೆ ನಾನು ಬರವಣಿಗೆಯೇ ಕೊಡೋಣವೆಂದಿದ್ದೇನೆ. ಸುಮಾರು 8 ಕೋಟಿ 55 ಲಕ್ಷ ಬೇರೆ ಬೇರೆ ಇಲಾಖೆಗಳಿಗೆ ಸಕ್ರಮವಾಗಬೇಕಾಗಿರುವುದೂ ಕೂಡ ಉಳಿದಿದೆ. ಇದನ್ನು ಮಾರ್ಚ್ 31 ರಲ್ಲಿ ಕೊನೆಗೊಂಡ ಲೆಕ್ಕಪರಿಶೋಧನಾ ವರದಿಯಲ್ಲಿ ಅದನ್ನು ಮಂಡನೆ ಮಾಡಿದ್ದಾರೆ. ಮತ್ತು ಇವತ್ತು ಈ ವರ್ಷದಲ್ಲಿ ನಮ್ಮ ರಾಷ್ಟ್ರಾಧ್ಯಕ್ಷರು ಇಲ್ಲಿ ಭಾಷಣವನ್ನು ಮಾಡಿ ಹೋಗಿದ್ದಾರೆ. ಸುವರ್ಣ ಸಂಭ್ರಮ ವರ್ಷವನ್ನು ಅವರು ಉದ್ಘಾಟನೆ ಮಾಡಿ ಹೋಗಿದ್ದಾರೆ. ರಾಷ್ಟ್ರಾಧ್ಯಕ್ಷರ ಭಾಷಣ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ. ಆದರೂ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುವುದೇನೆಂದರೆ ಸುವರ್ಣ ಕರ್ನಾಟಕದ ಸಂಭ್ರಮದ ಸಂದರ್ಭದಲ್ಲಿ ಬಹುಶ 224 ಕ್ಷೇತ್ರಗಳಲ್ಲೂ ಒಂದು ಭವನವನ್ನು ಕಟ್ಟುವ ಯೋಜನೆಯನ್ನು ಮಾಡಬೇಕು. ಈ ವರ್ಷ ಭವನವನ್ನು ಕಟ್ಟುವುದಕ್ಕೆ ಆಗದೇ ಹೋದರೂ ಜಾಗವನ್ನಾದರೂ ಮಿಸಲಿಡುವ ಹಾಗೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸನ್ಮಾನ್ಯ ಉಪಮುಖ್ಯಮಂತ್ರಿ ಗಳವರಲ್ಲಿ ಕೇಳುಕೊಳ್ಳುತ್ತೇನೆ. ಮಾನ್ಯ ಉಪಮುಖ್ಯಮಂತ್ರಿಗಳ ಇದನ್ನು ಪರಿಗಣಿಸಬೇಕೆಂದು ನಾನು ಹೇಳುತ್ತೇನೆ. ಮತ್ತೆ ಯಾವುದೇ ರಾಷ್ಟ್ರ ಪ್ರಗತಿಯಾಗಬೇಕಾದರೆ ಹಳ್ಳಿಗಳು ಬಹಳ ಮುಖ್ಯ ಬಹುಶಃ ಕರ್ನಾಟಕದ ಬಹುತೇಕ ಏನು ಹಳೆಯ ಮೈಸೂರು ಭಾಗ ಇದೆ, ಹಳೆಯ ಮೈಸೂರಿನ ಭಾಗದಲ್ಲಿರತಕ್ಕ ಈ ಒಂದು ಜಿಲ್ಲೆಗಳು ತುಮಕೂರು ಇರಬಹುದು, ಬೆಂಗಳೂರು ಇರಬಹುದು, ಕೋಲಾರ ಇರಬಹುದು, ಚಿತ್ರದುರ್ಗ ಇರಬಹುದು, ಈ ಎಲ್ಲಕ್ಕೂ ಮೂಲವಾಗಿರುವುದು ಯಾವುದೇ ನದಿಯ ಮೂಲ ಎನ್ನುವುದಕ್ಕೆ ಹೆಚ್ಚಾಗಿ ಕೆರೆಗಳ ಮೂಲದ ಆಧಾರದಮೇಲೆ ಅವಲಂಬಿತವಾಗಿರುವ ಸಣ್ಣ ರೈತರುಗಳು ಮೂಲತ: ನಾನು ಬೆಂಗಳೂರಿನಲ್ಲಿ ಆಯ್ಕೆಯಾಗಿದ್ದರೂ ಸಹಾ ನಾನೊಬ್ಬ ಕೃಷಿ ಹಾಗೂ ತೋಟಗಾರಿಕೆಯ ಕುಟುಂಬದ ಹಿನ್ನೆಲೆಯಿಂದ ಬಂದಿರತಕ್ಕ ಒಬ್ಬ ಪ್ರತಿನಿಧಿಯಾಗಿ ನಾನು ಈ ಮಾತನ್ನು ಹೇಳಲು ಬಯಸುತ್ತೇನೆ. ಬಹುಶ. ಸಣ್ಣ ಸಣ್ಣ ರೈತರುಗಳು ಬೆಳೆಯತಕ್ಕ ಬೆಳೆಗಳಿಗೆ ಬೆಂಗಳೂರು ನಗರವಾಗಲಿ, ಅಥವಾ ಈ ರಾಜ್ಯದಲ್ಲಿ ಸರಿಯಾದ ಮಾರುಕಟ್ಟೆ ವ್ಯವಸ್ಥೆಗಳಿಲ್ಲ. ಅದು ಸೊಪ್ಪು ಇರಬಹುದು. ತರಕಾತಿ ಇರಬಹುದು. ಹಣ್ಣು ಇರಬಹುದು. ಇವತ್ತು ಈ ರಾಜ್ಯದಲ್ಲಿ ಒಂದು ಶಂಕು ಸ್ಥಾಪನೆ ನಡೆಯಿತು. ನಬಾರ್ಡ್‌ನ ಸಹಾಯದೊಂದಿಗೆ ಇವತ್ತು ಬ್ಯಾಟರಾಯನಪುರದಲ್ಲಿ ಸಗಟು ಮಾರುಕಟ್ಟೆ ಶಂಕು ಸ್ಥಾಪನೆಯಾಯಿತು. ಸುಮಾರು ವರ್ಷಗಳಾದರೂ ಸಹಾ ಇನ್ನು ಹೋಲ್‌ಸೇಲ್ ಮಾರುಕಟ್ಟೆ ಮಾಡಲು ಚಾಲನೆ ಸಿಕ್ಕಿಲ್ಲ. ಏಕೆ ಹೀಗೆ ಆಗುತ್ತಿದೆ? ಬಹುಶ: ಹೇಳುತ್ತೇನೆ,

ಅಂಬಾಡಳ್ಳಿ ಎಂದು ಹೇಳಿ ಸಾತನೂರು ಕ್ಷೇತ್ರದಲ್ಲಿದೆ. ಕನಕಪುರದಿಂದ ಮದ್ದೂರಿನವರೆಗೂ ಸುಮಾರು ಹತ್ತು ಗುಂಟೆ, ಇಪ್ಪತ್ತು ಗುಂಟೆ, ಹದಿನೈದು ಗುಂಟೆ ಬಹುಶ: ಎರಡು ಗುಂಟೆಗಳಲ್ಲಿಯೂ ತುಳಸಿ ಬೆಳೆ ಬೆಳೆಯುತ್ತಾರೆ. ಎಷ್ಟು ಜನರಿಗೆ ಗೊತ್ತಿದೆಯೋ ಇದು ಗೊತ್ತಿಲ್ಲ. ಈ ತಳಸಿ ಬೆಳೆ ಬೆಳೆದಿರುವ ಬೆಳೆಯನ್ನು ಎಸ್‌ಕೆಆರ್ ಮಾರುಕಟ್ಟೆ ಮುಂದೆ ಸುಮಾರು 55–60 ವರ್ಷ ಗಳಿಂದಲೂ ತಂದು ಮಾರುತ್ತಾರೆ. ಇವರಿಗೆ ಸರಿಯಾದ ಒಂದು ಮಾರುಕಟ್ಟೆ ಇಲ್ಲ. ಬೆಳಿಗ್ಗೆ ಎದ್ದರೆ ಫುಟ್‌ಬಾಲ್ ತರಹ ಅವರನ್ನು ಪೋಲೀಸ್‌ನವರು ಓಡಿಸುವುದು ಕಾರ್ಪೊರೇಷನ್‌ನವರು ಓಡಿಸುವುದು, ಅವರಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಬೇಕು. ಇವತ್ತು ನಿರುದ್ಯೋಗ ಸಮಸ್ಯೆ ಗ್ರಾಮೀಣ ಯುವಕರಲ್ಲಿ ಹೆಚ್ಚು ಹೆಚ್ಚು ಕಾಡುತ್ತಿರುವುದನ್ನು ನೋಡುತ್ತಿದ್ದೇವೆ. ಅವರು ಫ್ರಸ್ಟೇಟ್ ಆಗುತ್ತಿದ್ದಾರೆ. ವಿದ್ಯಾವಂತರಿಗೆ ಕೆಲಸಗಳು ಸಿಗುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಔಷಧಿ ಮೂಲ ಇರುವ ತಳಸಿ ಬೆಳೆಗೆ ಸೂಕ್ತ ವ್ಯವಸ್ಥೆಯನ್ನು ಮಾಡುವುದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ. ತುಳಸಿಯಲ್ಲಿ ಬರುವ ಔಷಧಿ ಏನು ಇದೆ, ಆಯಿಲ್ ಏನಿದೆ, ಆ ಆಯಿಲ್ ಕಂಟೆಂಟ್ ಅನ್ನು ಬಹುಶ: ಒಳ್ಳೆಯ ತುಳಸಿಯ ಕೃಷಿಯನ್ನು ಬೆಳೆದರೆ ಅದೇ ಒಂದು ಉದ್ಯೋಗವಾಗುತ್ತದೆ. ಇವುಗಳ ಬಗ್ಗೆ ನಾವ್ಯಾಕೆ ಗಮನವನ್ನು ಹರಿಸುವುದಿಲ್ಲ? ಇದರ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕು. ಮತ್ತೆ ಪರಮಶಿವಯ್ಯ ನವರ ವರದಿ ಏನು ಇದೆ ಅದು ಬಹಳ ಸ್ಪಷ್ಟವಾಗಿದೆ. ಪಶ್ಚಿಮ ಘಟ್ಟದಲ್ಲಿ ಪೋಲಾಗುತ್ತಿರುವ ನೀರನ್ನು ಹೇಗೆ ಈ ಕಡೆಗೆ ತಿರುಗಿಸುವುಕ್ಕೆ ಸಾಧ್ಯ ಇದೆ ಎನ್ನುವ ವರದಿ ಇದೆ, ಇವತ್ತು ಆ ಸಮೀಕ್ಷೆಗೆ ಹಣವನ್ನು ಇಟ್ಟಿರುವುದು ಸಾಲದು ಹಂತ ಹಂತವಾಗಿ ನಾವು ಹೇಗೆ ಗಂಗಾ ಕಾವೇರಿಯನ್ನು ಜೋಡಿಸಲಿಕ್ಕೆ ಸಾಧ್ಯ ಇದೆ ಎನ್ನುವ ಮಹತ್ತರವಾದ ಯೋಜನೆ ನಮ್ಮ ದೇಶದಲ್ಲಿ ನಮ್ಮ ಮುಂದೆ ಇದೆಯೋ ಹಾಗೆಯೇ ಪಶ್ಚಿಮ ಘಟ್ಟದಲ್ಲಿ ಪೋಲು ಆಗುತ್ತಿರುವ ಯೋಜನೆಗಳನ್ನು ಸಂರಕ್ಷಿಸಲು ಸರ್ಕಾರ ಯೋಜನೆಗಳನ್ನು ಹಾಕಿಕೊಳ್ಳಬೇಕು. ಊರಿಗೊಂದು ಕೆರೆ, ಕೆರೆಗೆ ಆ ನದಿ ನೀರು. ಎನ್ನುವ ಆ ಸ್ಲೋಗನ್ ಏನು ಇದೆ, ಆ ಘೋಷಣೆ ಏನು ಇದೆ. ಆ ರೀತಿಯಾಗಿ ನಾವು ಜೋಡಣೆ ಮಾಡಿಕೊಂಡು ಬಂದರೆ ಇವತ್ತಲ್ಲ ನಾಳೆ ಈ ಬಯಲು ಪ್ರದೇಶಗಳು ಖಂಡಿತವಾಗಿಯೂ ನೀರಾವರಿಗೆ ಒಳಪಡುತ್ತವೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಪ್ರತಿ ಒಂದು ಹೆಡ್‌ನಲ್ಲೂ ಬಜೆಟ್‌ನಲ್ಲಿ ನೋಡಿದಾಗ ನನಗೆ ಕಾಣುತ್ತಾ ಇರತಕ್ಕದ್ದು ಹಲವಾರು ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಹಣ ಖರ್ಚಾಗುತ್ತಿರುತ್ತದೆ. ಆದರೆ ಈ ಬಯಲು ಪ್ರದೇಶದ ನೀರಾವರಿ ಯೋಜನೆಗಳ ಬಗ್ಗೆ ನೋಡಿದಾಗ ಬಹಳಷ್ಟು 'ಆನೆ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ' ಎನ್ನುವ ರೀತಿಯಲ್ಲಿ ಇರುತ್ತದೆ. ದಯವಿಟ್ಟು ಇದು ಆಗಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತು "ಯಶಸ್ವಿನಿ" ಯೋಜನೆಯ ಬಗ್ಗೆ ನಾನು ವಿನಂತಿ ಮಾಡುವುದು ಏನೆಂದರೆ ನಗರ ಪ್ರದೇಶದಲ್ಲಿರತಕ್ಕಂಥ ಅಸಂಘಟಿತ ಕಾರ್ಮಿಕರಿಗೆ ಈ ಯೋಜನೆಯನ್ನು ವಿಸ್ತರಿಸಬೇಕು. ಇಲ್ಲವೆಂದರೆ ಬಹಳ ಕಷ್ಟ ಆಗುತ್ತದೆ. ನಗರ ಪ್ರದೇಶದಲ್ಲಿರತಕ್ಕಂಥ ಜನಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರತಕ್ಕಂಥದ್ದು ಪ್ರತಿ ಒಂದು ಸಮೀಕ್ಷೆಯಿಂದ ನಮಗೆ ಸ್ಪಷ್ಟವಾಗಿದೆ ಇದಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಇವತ್ತು ಯುವಕರಿಗೆ ಸಂಬಂಧಪಟ್ಟ ಹಾಗೆ ಒಂದು ಮಾತನ್ನು ನಾನು ತಮ್ಮ ಮುಂದೆ ಹೇಳಲು ಬಯಸುತ್ತೇನೆ. ಇಡೀ

ರಾಷ್ಟ್ರದಲ್ಲಿ ಇವತ್ತು 'ಯಂಗ್ ಇಂಡಿಯಾ' ಎಂದು ಹೇಳಿ ಕರೆಯುತ್ತಾರೆ. ಏಕೆ ಕರೆಯುತ್ತಾರೆ ಎಂದರೆ ಇರತಕ್ಕ ಜನಸಂಖ್ಯೆಯಲ್ಲಿ 60 ಭಾಗ 40 ವಯಸ್ಸಿನ ಕೆಳಗಡೆ ಇದ್ದಾರೆ. ಅದರಲ್ಲಿ ಸುಮಾರು 57 ಭಾಗ 18 ರಿಂದ 22 ವಯಸ್ಸು ಇರತಕ್ಕ ಯುವಕರು ಇದ್ದಾರೆ. ಈ ಯುವಕರಲ್ಲಿ 1 ಪರ್ಸೆಂಟ್‌ಗೂ ಸಹ ಸರ್ಕಾರಿ ಉದ್ಯೋಗಗಳು ಸಿಗುವುದಿಲ್ಲ ಉಳಿದಿರತಕ್ಕ 99 ಭಾಗ ಯುವಕರು ಏನು ಇದ್ದಾರೆ, ಯುವತಿಯರು ಏನು ಇದ್ದಾರೆ, ಅವರಿಗೆ ಸ್ವಯಂ ಉದ್ಯೋಗ, ಸ್ವಾವಲಂಬನೆ, ಈ ದಿಕ್ಕಿನಲ್ಲಿ ಯೋಜನೆಗಳನ್ನು ನಾವು ರೂಪಿಸತಕ್ಕಂಥ ಅಗತ್ಯ ಇದೆ. ಇವತ್ತು ಇರತಕ್ಕಂಥ ಬ್ಯಾಕ್‌ವರ್ಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಗಲಿ, ಪಿಎಂಆರ್‌ವೈ ಆಗಲಿ ಅಥವಾ ಬೇರೆ ಬೇರೆ ಎಸ್‌ಸಿ:ಎಸ್‌ಟಿ ಡೆವಲಪ್ ಮೆಂಟ್ ಕಾರ್ಪೊರೇಷನ್ ಆಗಲಿ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಗಲಿ ಜನರಿಗೆ ಏನೂ ಉಪಯೋಗವಾಗಿಲ್ಲ. ಬಹುಶ ನಿಜವಾಗಲೂ ಹೇಳುತ್ತೇನೆ. ಬಹಳ ನಾಚಿಕೆ ಆಗುತ್ತದೆ. ಒಬ್ಬ ಭಿಕ್ಷುಕನ ಹಾಗೆ ಒಬ್ಬ ಯುವಕ ಇವತ್ತು ಇವರ ಬ್ಯಾಂಕ್ ಮುಂದೆ ಸಣ್ಣ ಸಾಲ ತೆಗೆದುಕೊಳ್ಳಲು ಇಡೀ ವರ್ಷ ಕಾಯಬೇಕಾಗುತ್ತದೆ. ಬಹುಶ:ಇದರ ಬಗ್ಗೆ ಏಕೆ ಗಮನ ಹರಿಸುವುದಿಲ್ಲ? ಇವತ್ತು ನಕ್ಸಲೈಟ್ ಮೂವ್‌ಮೆಂಟ್ ಆಗಲಿ ಅಥವಾ ಯುವಕರುದಿಕ್ಕು ತಪ್ಪತಕ್ಕದ್ದು ಏಕೆ ಆಗುತ್ತಿದೆ ಎಂದರೆ ಯುವ ಜನರ ಬಗ್ಗೆ ಹೆಚ್ಚು ಒತ್ತನ್ನು ಹೆಚ್ಚು ಒತ್ತಾಸೆಯನ್ನು ನ್ಯಾಶನಲ್ ಯೂತ್ ಪಾಲಿಸಿ, ಸ್ಟೇಟ್ ಯೂತ್ ಪಾಲಿಸಿ ತರುವ ದಿಕ್ಕಿನಲ್ಲಿ ನಾವು ವಿಫಲರಾಗಿದ್ದೇವೆಂದು ಹೇಳಿ ಈ ಸಂದರ್ಭದಲ್ಲಿ ನಾನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಆದಷ್ಟು ಬೇಗ ರಾಜ್ಯ ಯುವ ನೀತಿಯನ್ನು ಆಯೋಜನೆ ಮಾಡಿ. ಕ್ರೀಡಾನೀತಿ ಶಿಕ್ಷಣದ ಜೊತೆಯಲ್ಲಿ ಇವತ್ತು ಸ್ವಯಂ ಉದ್ಯೋಗ ನೀತಿಯ ಬಗ್ಗೆ ವ್ಯವಸ್ಥೆ ಮಾಡಬೇಕಾಗುತ್ತದೆ. ಇವತ್ತು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ಗಳು ಔಟ್‌ಡೇಟ್ ಆಗಿದೆ. ಎಂಪ್ಲಾಯ್‌ಮೆಂಟ್ ಪಾರ್ಕ್‌ಗಳ ಅವಶ್ಯಕತೆ ಇದೆ ಎಂದು ನಾನು ಈ ಸಭೆಯಲ್ಲಿ ಹಲವಾರು ಸಾರಿ ಹೇಳಿದ್ದೆ. ಇವತ್ತು ಎಂಪ್ಲಾಯ್‌ಮೆಂಟ್ ನಮ್ಮ ರಾಜ್ಯದಲ್ಲಿ ಇದೆ. ಆದರೆ ಯುವಕ, ಯುವತಿಯರು ಹೇಗೆ ಪಡೆಯಬೇಕು? How to be presentable, acceptable and employable? ಆ ರೀತಿಯಾಗಿ ನಮ್ಮ ಯುವಕರನ್ನು ಸಜ್ಜುಗೊಳಿಸತಕ್ಕಂಥ ದಿಕ್ಕಿನಲ್ಲಿ ನಾವು ಕೆಲಸವನ್ನು ಮಾಡಬೇಕಾಗಿದೆ ಅದಕ್ಕೆ ಹಲವಾರು ಯೋಜನೆಗಳು ಇವೆ. ಪಕ್ಷಾತೀತವಾಗಿ ಕುಳಿತು ಕೊಂಡು ಈ ಸದನದಲ್ಲಿರತಕ್ಕಂಥ ಮಂತ್ರಿಗಳು ಸದಸ್ಯರು ಕುಳಿತುಕೊಂಡು ಯೋಜನೆಗಳನ್ನು ರೂಪಿಸಲಿಕ್ಕೆ ಅವಕಾಶ ಇದೆ. ಅದಕ್ಕೆ ನನ್ನ ಕ್ಷೇತ್ರದಲ್ಲಿಮಾಡಿದಂತಹ 'ಉದ್ಯೋಗ ಮೇಳ'" ನನಗೆ ಸ್ಫೂರ್ತಿಯನ್ನು ಕೊಟ್ಟಿದೆ ಎನ್ನುವ ಮಾತನ್ನು ಸನ್ಮಾನ್ಯ ಡಿಸಿಎಂ ರವರೊಡನೆ ಹಾಗೂ ಇನ್ನಿತರ ಸದಸ್ಯರೊಡನೆ ಹಂಚಿಕೊಳ್ಳಲು ನಾನು ಬಯಸುತ್ತೇನೆ. ಇವತ್ತು ಐಟಿಐಗಳು.

ಛೇರ್ಮನ್: ವೇಳೆ ಆಯಿತು, ಮುಗಿಸಿ.

ಶ್ರೀ ನೆ.ಲ.ನರೇಂದ್ರ ಬಾಬು: ಹೆಚ್ಚು ಸುಸಜ್ಜಿತವಾದಂತಹ ಐಟಿಐ ಇರತಕ್ಕದ್ದು ಪೀಣ್ಯ ಇಂಡಸ್ಟ್ರೀಯಲ್ ಎಸ್ಟೇಟ್‌ನಲ್ಲಿ. ಅಲ್ಲಿ ಕೇವಲ ಕೊಠಡಿಗಳು ಇಲ್ಲದೇ ಎಷ್ಟೋ ಕೆಲಸಗಳು ಆಗುತ್ತಿಲ್ಲ. ಸುಸಜ್ಜಿತ ಇನ್ಸ್ಟ್ರುಮೆಂಟ್‌ಗಳು ಇಲ್ಲದೇ ಕೆಲಸ ಆಗುತ್ತಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಸಣ್ಣ ಪುಟ್ಟ ಇಡೀ ಒಂದು ರಾಜ್ಯಕ್ಕೆ ಬೇಕಾಗಿರತಕ್ಕಂಥ ಐಟಿಐ ಬಗ್ಗೆ ಏಕೆ ನೋಡುತ್ತಿಲ್ಲ ಎನ್ನತಕ್ಕ ಮಾತನ್ನು

ಈ ಸಂದರ್ಭದಲ್ಲಿ ನಾನು ನಿಮ್ಮ ಮುಂದೆ ಹೇಳುತ್ತೇನೆ. ಇವತ್ತು ಯುವಕರ ಬಗ್ಗೆ ನಾನು ಇನ್ನೊಂದು ಮಾತು ಹೇಳುತ್ತೇನೆ. ವೀಡಿಯೋ ಗೇಮ್ಸ್‌ಗಳಾಗಲಿ, ಅಥವಾ ಕ್ಲಬ್‌ಗಳಾಗಲೀ ಅಥವಾ ಎಲ್ಲೆಂದರಲ್ಲಿ ಶಾಲೆಗಳ ಸುತ್ತ ಮುತ್ತ. ಮನೆಗಳ ಸುತ್ತ ಮುತ್ತ ಇರತಕ್ಕಂಥ ಈ ಬಾರ್ ಕಲ್ಚರ್‌ನ್ನು ಈ ಪಬ್ ಕಲ್ಚರನ್ನು ದಯವಿಟ್ಟು ಬ್ಯಾನ್ ಮಾಡಿ. We are just poisoning the roots and showering the shoots. ಯುವಕರು ಪ್ರಗತಿ ಆಗಬೇಕು ಎಂದು ಒಂದು ಕಡೆ ಹೇಳುತ್ತೇವೆ. ಕಾರ್ಡ್ ರೋಡ್ ನಂತರ ರಸ್ತೆಗಳನ್ನು ಬಾರ್ ರೋಡ್ ಆಗಿ ಮಾಡಿದ್ದೇವೆ. ಡಾ.ಎಂ.ಸಿ. ಮೋದಿ ರೋಡ್ ಬಾರ್ ರೋಡ್ ಆಗಿದೆ. ಇದು ಎಲ್ಲಾ ಕಡೆ ಆಗುತ್ತಿದೆ. ಇದು ನಮ್ಮ ಸಂಸ್ಕೃತಿಯಲ್ಲ. ಯುವಕರಿಗೆ ಬೇಕಾಗಿರತಕ್ಕದ್ದು ಬಾರ್ ಕಲ್ಚರ್ ಅಲ್ಲ. ಯುವಕರಿಗೆ ಬೇಕಾಗಿರತಕ್ಕದ್ದು ಯುವ ಕೇಂದ್ರಗಳು. ಮಾನವ ಸಂಪನ್ಮೂಲ ಅಭಿವೃದ್ಧಿ ಆಗಬೇಕಾದರೆ ಯುವಕರನ್ನು ಸಂಪನ್ಮೂಲ ಮತ್ತು ಸಧೃಡರನ್ನಾಗಿ ಮಾಡಬೇಕಾಗುತ್ತದೆ. ಆ ದಿಕ್ಕಿನಲ್ಲಿ ಇವತ್ತು ಯುವ ನೀತಿ ಬೇಕು ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡಲು ಬಯಸುತ್ತೇನೆ. ಬಹುಶಃ ಈ ಒಂದು ಕೇಂದ್ರ ಸರ್ಕಾರ ಇವತ್ತು ಗ್ರಾಮೀಣ ಯುವಕ ಯುವತಿಯರಿಗೆ ಸ್ವಯಂ ಉದ್ಯೋಗ ಯೋಜನೆಯನ್ನು ಏನು ಕೊಟ್ಟಿದೆ, ಅದನ್ನು ಬಹಳವಾಗಿ ಸ್ವಾಗತ ಮಾಡುತ್ತೇವೆ. ಕೇಂದ್ರ ಸರ್ಕಾರದ ಈ ಯೋಜನೆಯಲ್ಲಿ ಬಹಳಷ್ಟು ಆಶಾದಾಯಕ ಭಾವನೆ ಬಂದಿದೆ. ಶ್ರೀಮತಿ ಸೋನಿಯಾ ಗಾಂಧಿಯವರು ಇವತ್ತು ಒಂದು ಹೊಸ ದಿಕ್ಕನ್ನು ಕೊಟ್ಟಿದ್ದಾರೆ. ಎರಡು ವಿಚಾರ ಈ ದೇಶಕ್ಕೆ ಕೊಟ್ಟಿದ್ದಾರೆ. ಒಂದು ಗ್ರಾಮೀಣ ಯುವಕ ಯುವತಿಯರಿಗೆ ಉದ್ಯೋಗ ಕೊಡತಕ್ಕಂಥದ್ದು ಮತ್ತು ಇನ್ನೊಂದು ಟ್ರಾನ್ಸಪರೆನ್ಸಿ ಆಕ್ಟ್. ಟ್ರಾನ್ಸಪರೆನ್ಸಿ ಆಕ್ಟನ್ನು ಸರಿಯಾಗಿ ಬಳಸಿದರೆ ಈ ಅಧಿಕಾರದಲ್ಲಿರತಕ್ಕಂಥ ತಪ್ಪುಗಳನ್ನು ಸರಿ ಪಡಿಸಬಹುದು. ರೈಟ್ ಟು ಇನ್‌ಫರ್ಮೇಷನ್ ಆ ಮಾಹಿತಿಯನ್ನು ಕೊಟ್ಟಿರತಕ್ಕಂಥದ್ದು ಒಂದು ಉತ್ತಮ ಕೆಲಸ ಇದನ್ನು ಸರಿಯಾಗಿ ಬಳಸುವ ದಿಕ್ಕಿನಲ್ಲಿ ನಾವು ಸನ್ನದ್ಧರಾದರೆ ಬಹುಶ ಹಲವಾರು ವಿಚಾರಗಳ ಬಗ್ಗೆ ನಾವು ಬೆಳಕನ್ನು ಚೆಲ್ಲಲಿಕ್ಕೆ ಸಾಧ್ಯ ಆಗುತ್ತದೆ. ಇವತ್ತು ಲೋಕಾಯುಕ್ತರವರು ಎಲ್ಲಾ ಕಡೆ ರೈಡ್ ಮಾಡುತ್ತಿರತಕ್ಕದ್ದನ್ನು ನಾನು ನೋಡುತ್ತಿದ್ದೇನೆ. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಇವತ್ತು ಪ್ರತಿ ಒಂದು ಅಧಿಕಾರಿಯೂ ಸಹ ತನ್ನ ಆಸ್ತಿಯನ್ನು ಘೋಷಣೆ ಮಾಡಿಕೊಳ್ಳುತ್ತಾರೆ. ಆಸ್ತಿಯನ್ನು ಘೋಷಣೆ ಮಾಡಿಕೊಳ್ಳತಕ್ಕದನ್ನು ಯಾರು ಸ್ಕ್ರುಟಿನಿ ಮಾಡುತ್ತಾರೆ? ಐಎಎಸ್ ಆಗಲಿ ಕೆಎಎಸ್ ಆಗಲಿ ಅಥವಾ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಆಗಲಿ. ಸಬ್ ಇನ್ಸ್‌ಪೆಕ್ಟರ್ ಆಗಲೀ ಇದಕ್ಕೆ ಒಂದು ಸಪರೇಟ್ ಏಜೆನ್ಸಿಆಗಬೇಕು. ಸದನದ ಒಂದು ಸಮಿತಿ ಆಗಬೇಕು ಅದರಲ್ಲಿ CAG ಇರಬೇಕು. ಎಲ್ಲರೂ ಇದ್ದು ಅದನ್ನು ಸ್ಕ್ರುಟಿನಿ ಮಾಡತಕ್ಕಂಥ ವ್ಯವಸ್ಥೆ ಆಗಬೇಕು. ಇಲ್ಲ ಎಂದರೆ ಬಹುಶಃ ಹೇಳುತ್ತೇನೆ. ಇದು ನಿರಂತರವಾಗಿ ಒಂದು ಗೂಬೆ ಕೂರಿಸಿದ ಹಾಗೆ ಆಗುತ್ತದೆ. ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ. ಐದೇ ನಿಮಿಷದಲ್ಲಿ ಮುಗಿಸುತ್ತೇನೆ.

ಛೇರ್ಮನ್:– ಆಗಿ ಹೋಗಿಯಿತು, ಮುಗಿಸಿ.

ಶ್ರೀ ನ.ಲ.ನರೇಂದ್ರ ಬಾಬು:– ಆಗಿ ಹೋಯಿತು, ಐದು ನಿಮಿಷದಲ್ಲಿ ಮುಗಿಸಿ ಬಿಡುತ್ತೇನೆ ಸ್ವಾಮಿ. ಇವತ್ತು ವಿದ್ಯಾರ್ಥಿಗಳಿಗೆ ಸೈಕಲ್ ಕೊಡಿಸುತ್ತಿದ್ದಾರೆ.

ಛೇರ್ಮನ್:– ನೀವು ಮುಗಿಸದಿದ್ದರೆ ನಾನು ಮುಗಿಸುತ್ತೇನೆ.

ಶ್ರೀ ನೆ.ಲ.ನರೇಂದ್ರ ಬಾಬು:– ಈ ಒಂದು ಒಳ್ಳೆಯ ಯೋಜನೆಯನ್ನು ಘೋಷಣೆ ಮಾಡಿದ್ದಾರೆ. ಆದರೆ ನಾನು ಒಂದು ವಿನಂತಿ ಮಾಡಿಕೊಳ್ಳುವುದು ಏನೆಂದರೆ ಈ ಒಂದು ಯೋಜನೆಯಲ್ಲಿ ಕೇವಲ ಹೆಣ್ಣು ಮಕ್ಕಳಿಗೆ ಮಾತ್ರ ಕೊಡದೇ ಗಂಡು ಮಕ್ಕಳಿಗೂ ಕೊಡಿ. ನಮ್ಮ ಹೆಣ್ಣು ಮಕ್ಕಳು ಆಗಲೇ ಹೇಳುತ್ತಿದ್ದರು. ನಮ್ಮ ಮಾಜಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಹೇಳುತ್ತಿದ್ದರು. ಹೆಣ್ಣುಮಕ್ಕಳಿಗೆ ಸೈಕಲ್ ಸುರಕ್ಷಿತವೇ? ಎಂದು ಹೇಳುತ್ತಿದ್ದರು. ಗಂಡು ಮಕ್ಕಳಿಗೂ ಏಕೆ ಸೈಕಲ್ ಯೋಜನೆ ವಿಸ್ತರಣೆ ಮಾಡಬಾರದು? ದಯವಿಟ್ಟು ವಿಸ್ತರಣೆ ಮಾಡತಕ್ಕದ್ದು ಆಗಲಿ. ಏಕೆಂದರೆ ನನ್ನ ಕ್ಷೇತ್ರದಲ್ಲಿ ಅಂತಹ ಒಂದು ಕಾರ್ಯಕ್ರಮ. 'ವಿದ್ಯಾರ್ಥಿ ಮಿತ್ರ' ಎಂದು 10–15 ವರ್ಷಗಳ ಹಿಂದೆ. ಆರಂಭ ಮಾಡಿದ್ದೇವೆ. ಸೈಕಲ್ ಕೊಡತಕ್ಕ ಪ್ರೋತ್ಸಾಹ ಯೋಜನೆ ಮಾಡಿದ್ದೇವೆ. ದಯವಿಟ್ಟು ಗಂಡು ಮಕ್ಕಳಿಗೂ ಕೊಡಬೇಕು. ಪ್ರತಿ ಒಂದು ಶಾಲೆಗಳಲ್ಲಿಯೂ ಬುಕ್ ಬ್ಯಾಂಕ್‌ಗಳನ್ನು ನೀಡತಕ್ಕಂಥ ಯೋಜನೆ ಆಗಬೇಕು ಮತ್ತು ಜೊತೆಯಲ್ಲಿ ಬಹಳ ಮುಖ್ಯ ಎಂದರೆ ಈ ಪೋಷಕರವನ್ನು ಅಡ್ಮಿಷನ್ ಟೈಮಿನಲ್ಲಿ ಶೋಷಣೆ ಮಾಡತಕ್ಕದ್ದಕ್ಕೆ ಕಡಿವಾಣ ಹಾಕಲು ಒಂದು ಸರಿಯಾದ ನಿಲುವನ್ನು ತೆಗೆದುಕೊಳ್ಳಬೇಕು. ಹೇಗೆ ದೆಹಲಿಯಲ್ಲಿ ಸೆಂಟ್ರಲ್ ಅಡ್ಮಿನಿಸ್ಟ್ರೇಷನ್ ಸಿಸ್ಟಂ ತಂದಿದ್ದಾರೋ ಹಾಗೆ ನಮ್ಮ ರಾಜ್ಯದಲ್ಲೂ ಮಾಡಬೇಕು. ಕಳೆದ ಬಾರಿ ಮಾನ್ಯ ಶಿಕ್ಷಣ ಮಂತ್ರಿಗಳಾಗಿದ್ದಂತಹ ಡಿ. ಮಂಜುನಾಥ್ ಅವರು ನನಗೆ ಭರವಸೆ ಕೊಟ್ಟಿದ್ದರು. ಆದರೆ ಅದರ ಬಗ್ಗೆ ಒಂದು ವಿಚಾರ ಅಧಿಕಾರಿಗಳಿಂದಾಗಲೇ ಕ್ರಮ ಆಗಲಿ ಅಥವಾ ಅದರ ಬಗ್ಗೆ ಒಂದು ಚರ್ಚೆಯೂ ಇದುವರೆಗೆ ಆಗಲಿಲ್ಲ. ಹೇಗೆ ಅಡ್ಮಿಷನ್ ಮಾಡಬೇಕು? ಎಸ್‌ಎಸ್‌ಎಲ್‌ಸಿ ಪಾಸಾದವನು ಪಿಯುಸಿ ಅಡ್ಮಿಷನ್ ಆಗಬೇಕಾದರೆ ಪೋಷಕರ ಗೋಳು ಹೇಳತೀರದು. ಇದರ ಬಗ್ಗೆ ನಾವು ಏಕೆ ಯೋಚನೆ ಮಾಡುವುದಿಲ್ಲ. ಲಕ್ಷಾಂತರ ರೂಪಾಯಿ ಕೋಟ್ಯಾಂತರ ರೂಪಾಯಿ ನಾವು ಶಿಕ್ಷಣ ಕ್ಷೇತ್ರಕ್ಕೆ ಖರ್ಚು ಮಾಡುತ್ತೇವೆ ಆದರೆ ಇಂಥಹದನ್ನು ನಾವು ಸರಿಯಾಗಿ ಚಿಂತನೆ ಮಾಡಲಿಲ್ಲ. ಎಂದರೆ ಈ ಸಾಮಾನ್ಯ ಜನರಿಗೆ ವಿದ್ಯೆಯನ್ನು ಆಸಕ್ತಿ ಇರುವವರೆಗೆ ಕೊಟ್ಟ ಹಾಗೆ ಆಗುವುದಿಲ್ಲ. ಕಳೆದ ವರ್ಷ ನನಗೆ ಬಹಳ ಸಂತೋಷ ಆಗುತ್ತದೆ. ಪೈಲಟ್ ಆಗತಕ್ಕಂಥ ಏರ್ ಹೋಸ್ಟೆಸ್ ಆಗತಕ್ಕಂಥ, ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ನಮ್ಮ ಸರ್ಕಾರ ತರಬೇತಿ ಕೊಟ್ಟಿತು. ಇವತ್ತು ಏಕೋ ಆ ಯೋಜನೆ ಕಾಣುತ್ತಿಲ್ಲ. ಆ ಯೋಜನೆ ಮುಂದುವರೆದಿದೆಯೋ ಇಲ್ಲವೋ ಗೊತ್ತಿಲ್ಲ. ನನಗೆ ಬಹಳ ಹೆಮ್ಮೆಯಿಂದ ನಮ್ಮ ಊರಿನಿಂದ ಒಂದು ಹುಡುಗಿ ಬಂದು ಹೇಳಿದಳು. ನೆಲಮಂಗಲದ ಹುಡುಗಿ ಈ ಸಾರಿ ಏರ್‌ಹೋಸ್ಟೆಸ್ ಆಗಿ ಸೆಲೆಕ್ಟ್ ಆಗಿ ಹೇಳಿದಳು. "ಅಣ್ಣ ನನಗೆ ಬಹಳ ಸಂತೋಷ ಆಯಿತು. ನನಗೆ ಬಹಳ ದಿವಸಗಳ ಕನಸು ಇತ್ತು." ಅವಳು ಒಬ್ಬ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಹುಡುಗಿ ಅಂತಹ ಕಾರ್ಯಕ್ರಮಗಳನ್ನು ದಯವಿಟ್ಟು ಮುಂದುವರಿಸಿ. ಯಾವ ಪಕ್ಷ ಮಾಡಿತು ಯಾವ ಪಕ್ಷ ಬಿಟ್ಟಿತು ಎಂದಲ್ಲ. ಒಬ್ಬ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ಹುಡುಗ ಪೈಲಟ್ ಆಗುತ್ತಾರೆ ಎಂದರೆ, ಹುಡುಗಿ ಒಬ್ಬಳು ಗಗನ ಸಖಿ ಆಗುತ್ತಾಳೆ ಎಂದರೆ ಈ ದೇಶಕ್ಕೆ ಹೆಮ್ಮೆ ಅಲ್ಲವಾ? ನಾವು ಆ ದಿಕ್ಕಿನಲ್ಲಿ ಬಹುಶ ಕೆಲಸವನ್ನು ಮಾಡಬೇಕು ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಡೊನೇಷನ್‌ಗೆ

ಕಡಿವಾಣ ಹಾಕುವ ದಿಕ್ಕಿನಲ್ಲಿ ಗಮನ ಹರಿಸಬೇಕು ಮತ್ತು ನರ್ಸರಿ ಶಾಲೆಗಳನ್ನು ಗವರ್ನಮೆಂಟ್ ಶಾಲೆಗಳ ಜೊತೆ ಟೈಅಪ್ ಮಾಡತಕ್ಕದ್ದು ಆಗಬೇಕು. ಕಳೆದ 20 ವರ್ಷಗಳಿಂದ ಶಾಲಾ ಅಭಿವೃದ್ಧಿಯ ಸದಸ್ಯನಾಗಿ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಗವರ್ನಮೆಂಟ್ ಶಾಲೆಗೂ ಪ್ರೈವೇಟ್ ಶಾಲೆಗೂ ಇರತಕ್ಕ ವ್ಯತ್ಯಾಸ ಇಷ್ಟೇ. ನಮ್ಮ ಮಕ್ಕಳು ನಿಮ್ಮ ಮಕ್ಕಳು ಓದ ಬೇಕಾದರೆ ಒಂದು ಪ್ರೀ ನರ್ಸರಿ ಎಲ್‌ಕೆಜಿ, ಯುಕೆಜಿ ಎಂದು ಓದಿಸುತ್ತೇವೆ ಸರ್ಕಾರಿ ಶಾಲೆಗೆ ಬರತಕ್ಕ ಮಗು ನೇರವಾಗಿ ಒಂದನೇ ಕ್ಲಾಸಿಗೆ ಬರುತ್ತದೆ. ಏನೇನೂ ಗೊತ್ತಾಗುವುದಿಲ್ಲ. ಅಕ್ಷರ ಜ್ಞಾನ ಇರುವುದಿಲ್ಲ. ಅಂಕಿ ಜ್ಞಾನ ಇರುವುದಿಲ್ಲ. ಮಗ್ಗಿ ಜ್ಞಾನ ವಿರುವುದಿಲ್ಲ ಬಹುಶ ಈ ತಾರತಮ್ಯ ಹೋಗಬೇಕು ಎಂದರೆ ನರ್ಸರಿ ಶಾಲೆಗಳನ್ನು ಒಂದನೇ ಕ್ಲಾಸ್ ಜೊತೆಗೆ ಸರ್ಕಾರಿ ಶಾಲೆಯ ಜೊತೆಗೆ ಟೈಅಪ್ ಮಾಡಬೇಕು. ಆಗ ಮಾತ್ರ ರಾ ಮೆಟೀರಿಯಲ್ ಒಳ್ಳೆಯದು ಇರುತ್ತದೆ. ಮಿಷನ್ ಚೆನ್ನಾಗಿ ಕೆಲಸ ಮಾಡುತ್ತದೆ. The so-called teachers can work better. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿಹೇಳುತ್ತೇನೆ. ಇವತ್ತು ಟಾಸ್ಕ್ ಫೋರ್ಸ್‌ಗಳನ್ನು ರಾಜ್ಯ ಮಟ್ಟದಲ್ಲಿ ಮಾಡಬೇಕು ಎಂದು ಒಂದು ಹೇಳಿಕೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಎಲ್ಲೊ ಒಂದು ಕಡೆ ಹೇಳಿದರು. ನಾನು ಕೇಳುವುದು ಎಂದರೆ I damand constituency wise task force ಮಾಡಬೇಕು That may be education task force sports task for and infrastructure development task force ಇದನ್ನು ರಿವ್ಯೂ ಮಾಡತಕ್ಕಂಥ ವಿಚಾರ ಒಬ್ಬ ಕ್ಷೇತ್ರದ ಪ್ರತಿನಿಧಿಗಳಿಗೆ ಕೊಡಬೇಕು. ಆಗ ಮಾತ್ರ ಸರ್ವತೋಮುಖ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲ ಎಂದು ಹೇಳಿದರೆ ಎಲ್ಲೋ ಒಂದು ಕಡೆ ರಾಜ್ಯದಲ್ಲಿ ಆಗುತ್ತದೆ. ನಾನು ಅಂಕಿ ಅಂಶಗಳನ್ನು ನೋಡುತ್ತಿದ್ದೆ, ಒಂದು ಸಣ್ಣ ಉದಾಹರಣೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಒಂದು ಬ್ಯಾಕ್‌ವರ್ಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಲ್ಲಿ ಒಂದು ಸ್ಕೀಮ್ ಇದೆ. ಅದು ಆಟೋರಿಕ್ಷಾವನ್ನು ಕೊಡತಕ್ಕ ಯೋಜನೆ. ಅದನ್ನು ಹೇಗೆ ಮಾಡುತ್ತಾರೆ ಎಂದರೆ ಇಡೀ 12 ಕ್ಷೇತ್ರದ ಒಂದು ಕಡೆಹಾಕಿ ಲಾಟರಿ ಎತ್ತುತ್ತಾರೆ ಯಾರದ್ದೋ ಅದೃಷ್ಟ ಇತ್ತು ಅಂದರೆ ಒಂದೇ ಕ್ಷೇತ್ರದವರದ್ದು ಬಂದು ಬಿಡುತ್ತದೆ. ನನ್ನ ಕ್ಷೇತ್ರದಲ್ಲಿ ಇರತಕ್ಕಂಥ "4 ಲಕ್ಷ ಜನರಿಗೆ ಬರುವುದಿಲ್ಲ ಅಲ್ಲಿ ನೋಡಿದರೆ ಆ ಕ್ಷೇತ್ರದಲ್ಲಿ ಅಷ್ಟೊಂದು ಬಂತು ನಮಗೆ ಇಲ್ಲ" ಎಂದು ಹೇಳುತ್ತಾರೆ. ಹೇಗೆ ರಾಜ್ಯಕ್ಕೆ ಟಾರ್ಗೆಟ್ ಫಿಕ್ಸ್ ಮಾಡುತ್ತಾರೋ ಜಿಲ್ಲೆಗೆ ಟಾರ್ಗೆಟ್ ಫಿಕ್ಸ್ ಮಾಡುತ್ತಾರೋ ಅದೇ ರೀತಿ ಕ್ಷೇತ್ರಾವಾರು ಇಂತಹ ಯೋಜನೆಗಳ ಅನುಷ್ಟಾನ ಮಾಡುವುದಕ್ಕೆ ಟಾರ್ಗೆಟ್ ಫಿಕ್ಸ್ ಮಾಡಬೇಕು. ಇದನ್ನು ಅಧಿಕಾರಿಗಳಿಗೆ ಹೇಳಿದರೆ ಯಾಕೆ ಕಿವಿಗೆ ಹೋಗುವುದಿಲ್ಲವೋ? ಮಂತ್ರಿಗಳಿಗೂ ವಿನಂತಿ ಮಾಡುತ್ತೇನೆ. ದಯವಿಟ್ಟು ನಮ್ಮ ಕ್ಷೇತ್ರಕ್ಕೂ "ಸಮಪಾಲು ಸಮಬಾಳ್ವೆ" ಎನ್ನುವ ರೀತಿಯಲ್ಲಿ ನಾವೂ ಸಹ ಕೇಳುತ್ತೇವೆ. ಶ್ರೀ ದಿನೇಶ್ ಗುಂಡೂರಾವ್ ಅವರು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದರು. ಆಶ್ರಯ ಮನೆಗಳ ವಿಚಾರದಲ್ಲಿ ಹೇಳುತ್ತೇನೆ. ರಾಜಾಜಿನಗರ ಕ್ಷೇತ್ರದ ಒಬ್ಬರಿಗೂ ಸಿಕ್ಕಿಲ್ಲ ಸ್ವಾಮಿ. ನಾವೇನಾಗಬೇಕು? ನಮ್ಮಲ್ಲಿ ಬಡವರು ಇಲ್ಲವೇ? ಸುಮಾರು 5 ಸಾವಿರ ಅರ್ಜಿಗಳನ್ನು ಇದುವರೆವಿಗೂ ಡೆಪ್ಯುಟಿ ಕಮೀಷನರ್‌ಗೆ ಕೊಟ್ಟಿದ್ದೇವೆ. ಇದುವರೆಗೂ ಸಿಕ್ಕಿಲ್ಲ. ಬಿಪಿಎಲ್ ಕಾರ್ಡ್ ಕೊಟ್ಟಿಲ್ಲ. ಬಿಪಿಎಲ್ ಕಾರ್ಡ್ ಬಗ್ಗೆ

ಛೇರ್ಮನ್: ಮಾನ್ಯ ನರೇಂದ್ರ ಬಾಬು ಅವರೇ ಮುಗಿಸಿ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ನೆ.ಲ.ನರೇಂದ್ರ ಬಾಬು: ಬಿಪಿಎಲ್ ಕಾರ್ಡ್ ಬಗ್ಗೆ ಹೇಳುತ್ತೇನೆ. ಬಹಳ ಮುಖ್ಯವಾಗಿರತಕ್ಕದ್ದು ನಮ್ಮ ದೇಶದಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ 46 ನ್ಯಾಯ ಬೆಲೆ ಅಂಗಡಿ ಇದೆ. ಆದರೆ ನಮ್ಮ ರಾಜ್ಯದಲ್ಲಿ 39 ಮಾತ್ರ ಇದೆ. ಪ್ರತಿ ಸಾರಿ 45 ರೂಪಾಯಿ ಕೊಟ್ಟು ಕಾರ್ಡ್ ಮಾಡಿಸಬೇಕು ಎಂದರೆ ಜನರಿಗೆ ಈಗಾಗಲೇ ಎರಡನೇ ಸಾರಿ ಕಾರ್ಡ್ ಆಯಿತು. ಎರಡು ಕೋಟಿ ಜನರ ಕಾರ್ಡ್ ಎಂದರೆ ಎಷ್ಟಾಯಿತು? ದಯವಿಟ್ಟು ಹೇಳುತ್ತೇನೆ. ಪ್ರತಿ ಸಾರಿ ಹಣ ಕಟ್ಟಿಸಿಕೊಳ್ಳತಕ್ಕದ್ದನ್ನು ನಿಲ್ಲಿಸಿ. ಬಿಪಿಎಲ್ ಕಾರ್ಡ್ ಆಗಲಿ, ಅಥವಾ ಎಪಿಎಲ್ ಕಾರ್ಡ್ ಆಗಲಿ, ಈ ದರದ ಒಂದ ಲಾಬಿ ಆಗಿದೆ ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್: ಈಗ ಆಯವ್ಯಯದ ಮೇಲಿನ ಚರ್ಚೆ ಮುಗಿದಿದೆ. ಸದನವನ್ನು ನಾಳೆ ಬೆಳಿಗ್ಗೆ 9.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

ಸದನವು ರಾತ್ರಿ 8.52ಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ 29.03.2006 ರಂದು ಬೆಳಿಗ್ಗೆ 9.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಅನುಬಂಧ-1

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಮೂರನೇ ಅಧಿವೇಶನ

(ಮುಂದುವರಿದ ಉಪವೇಶನಗಳು)

ಕರ್ನಾಟಕ ಧನವಿನಿಯೋಗ ವಿಧೇಯಕ, 2006

(2006ರ ವಿಧಾನಸಭೆಯ ವಿದೇಯಕ ಸಂಖ್ಯೆ 2)

2005-06ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2005-06ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು : ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ ಅಧಿನಿಯಮ 2006 ಎಂದು ಕರೆಯತಕ್ಕದ್ದು.